## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 394 ( 554 ) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.02.2022 |
| ಉತ್ತರಿಸಬೇಕಾದ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) 1995ರ ನಂತರ ಪ್ರಾರಂಭವಾದ ಶಾಲಾ-ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ; | 1995ರ ನಂತರ ಆರಂಭವಾದ ಅನುದಾನ ರಹಿತ ಕನ್ನಡ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ಹಿಂದಿನ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಹಾಲಿ ಸಭಾಪತಿ ರವರ ಸಮ್ಮುಖದಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ, ಸದರಿ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ 1995 ರಿಂದ 2019 ರವರೆಗೆ ಪ್ರತಿ 05 ವರ್ಷದ ಬ್ಲಾಕ್ ಅವಧಿಯಲ್ಲಿ ಪ್ರಾರಂಭಿಸಲಾಗಿರುವ ಶಾಲಾ ಕಾಲೇಜುಗಳಲ್ಲಿ ಎಷ್ಟು ಶಿಕ್ಷಕರು / ಉಪನ್ಯಾಸಕರುಗಳು / ಬೋಧಕೇತರುಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಇವರುಗಳನ್ನು ಅನುದಾನಕ್ಕೆ ಒಳಪಡಿಸಿದ್ದಲ್ಲಿ ವಾರ್ಷಿಕವಾಗಿ ತಗಲುವ ಅಂದಾಜು ವೆಚ್ಚದ ಮಾಹಿತಿಯನ್ನು, ಆಯುಕ್ತಾಲಯಗಳು ಮತ್ತು ಪದವಿ ಪೂರ್ವ ನಿರ್ದೇಶನಾಲಯದಿಂದ ಪಡೆದು ಪರಿಶೀಲಿಸಲಾಗುತ್ತಿದೆ. |

| | |
|---|---|
| ಆ) ವೇತನಾನುದಾನಕ್ಕೆ ಒಳಪಡಿಸಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ: | ಸರ್ಕಾರದ ಆದೇಶ ಸಂಖ್ಯೆ : ಇಡಿ 59 ಪಿ ಎಂ ಸಿ 2006, ದಿನಾಂಕ : 06.10.2007ರನ್ವಯ ದಿನಾಂಕ : 01.06.1987 ರಿಂದ 1992-93ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಮತ್ತು ಇಡಿ 217 ಪಿ ಎಂ ಸಿ 2008, ದಿನಾಂಕ : 08.09.2008ರನ್ವಯ 1993-94 ಮತ್ತು 1994-95ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆಯಿಲ್ಲದೆ ನಡೆದ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಅನುಸರಿಸಲಾದ ಮಾನದಂಡಗಳಂತೆಯೇ ಕ್ರಮವಹಿಸಲು ಪರಿಶೀಲಿಸಲಾಗುವುದು. (ಮಾನದಂಡಗಳ ಪ್ರತಿ ಲಗತ್ತಿಸಿದೆ) |
| ಇ) ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳನ್ನು ಅನುದಾನಕ್ಕೆ ಒಳಪಡಿಸಲಾಗುತ್ತಿದೆಯೇ: | ಹೌದು |
| ಈ) ಇಲ್ಲವಾದಲ್ಲಿ, ಅನುದಾನಕ್ಕೆ ಒಳಪಡಿಸದಿರಲು ಕಾರಣಗಳೇನು? | ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಅನ್ವಯಿಸುವುದಿಲ್ಲ. |

ಇಪಿ 49 ಪಿಎಂಸಿ 2022

( ಬಿ.ಸಿ.ನಾಗೇಶ್ )
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು.

(41) ANNEXURE – J

KA / BG - GPO / 2515 / WPP-47 / 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ.– I | ಬೆಂಗಳೂರು, ಗುರುವಾರ, ಜೂನ್ ೨, ೨೦೧೧ (ಜ್ಯೇಷ್ಠ ೧೨, ಶಕ ವರ್ಷ ೧೯೩೩) | ನಂ. ೫೪೧

ಕರ್ನಾಟಕ ಸರ್ಕಾರದ ನಡವಳಿಗಳು

ಶಿಕ್ಷಣ ಸಚಿವಾಲಯ

ವಿಷಯ: ದಿನಾಂಕ: 01.06.1987 ರಿಂದ 1994–95 ನೇ ಸಾಲಿನಲ್ಲಿ ಪ್ರಾರಂಭಿಸಿ, ಸತತವಾಗಿ ನಡೆಸುತ್ತಿರುವ ರಾಜ್ಯದಲ್ಲಿನ ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ ದಿನಾಂಕ 30–08–2007 ರ ಹಾಗೂ ದಿನಾಂಕ: 04.09.2008 ರ ಪೂರ್ವದಲ್ಲಿ ಸಂಬಂಧಿಸಿದ ಆಡಳಿತ ಮಂಡಳಿಯಿಂದ ನೇಮಕಗೊಂಡು ಸದರಿ ಸಂಸ್ಥೆಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರುಗಳಿಗೆ ಒಂದು ಬಾರಿಗೆ ಮೀಸಲಾತಿಯಲ್ಲಿ ವಿನಾಯಿತಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006, ದಿನಾಂಕ: 06.10.2007
2. ಸರ್ಕಾರದ ಆದೇಶ ಸಂಖ್ಯೆ: ಇಡಿ 217 ಪಿಎಂಸಿ 2008, ದಿನಾಂಕ: 08.09.2008

ಪ್ರಸ್ತಾವನೆ :–

ದಿನಾಂಕ: 01.06.1987 ರಿಂದ 1992–93ನೇ ಮತ್ತು 1993–94 ರಿಂದ 1994–95 ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಎಲ್ಲಾ ವರ್ಗದ ಆಡಳಿತ ಮಂಡಳಿಗಳ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಓದಲಾದ (1)ರ ಸರ್ಕಾರದ ಆದೇಶ ಸಂಖ್ಯೆ : ಇಡಿ 59 ಪಿಎಂಸಿ 2006, ದಿನಾಂಕ: 6.10.2007 ರಲ್ಲಿ ಮತ್ತು ಓದಲಾದ (2) ರ ಸರ್ಕಾರದ ಆದೇಶ ಸಂಖ್ಯೆ : ಇಡಿ 217 ಪಿಎಂಸಿ 2008, ದಿನಾಂಕ : 08.09.2008 ರಲ್ಲಿ ಆಸ್ಪದ ಕಲ್ಪಿಸಲಾಗಿದೆ.

2. ದಿನಾಂಕ 1.6.1987ರಿಂದ 1994–95ರ ಅವಧಿಯಲ್ಲಿ ಪ್ರಾರಂಭಿಸಿದ ಸಂಸ್ಥೆಗಳಿಗೆ ಶಾಶ್ವತ ಅನುದಾನರಹಿತ ಸಂಸ್ಥೆಗಳೆಂದು ಆಡಳಿತ ಮಂಡಳಿಗಳಿಂದ ಮುಚ್ಚಳಿಕೆ ಪಡೆದು ಅನುಮತಿ ನೀಡಲಾಗಿರುತ್ತದೆ. ಇಂತಹ ಸಂಸ್ಥೆಗಳಲ್ಲಿ ನೇಮಕಾತಿಗೊಂಡ ಶಿಕ್ಷಕರು ಸುಮಾರು 15 ರಿಂದ 20 ವರ್ಷಗಳ ಸತತವಾದ ಸೇವೆಯನ್ನು ಮಾಡಿರುವುದು ಸಹ

ಕಂಡು ಬರುತ್ತದೆ. ಅನೇಕ ಶಿಕ್ಷಕರು ವಯೋಮಿತಿಯನ್ನು ಸಹ ಮೀರಿದ್ದು, ಇವರಿಗೆ ಬೇರೆ ಸಂಸ್ಥೆಗಳಲ್ಲಿ ಅಥವಾ ಸರ್ಕಾರದ ನೇಮಕಾತಿಗಳಲ್ಲಿ ಅವಕಾಶಗಳು ಸಹ ಲಭ್ಯವಾಗುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಾನವೀಯತೆ ದೃಷ್ಟಿಯಿಂದ ದಿ. 1.6.1987ರಿಂದ 1992–93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ 30–08–2007 ರ ಪೂರ್ವದಲ್ಲಿ ಮತ್ತು 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲಿಗೆ ಸಹಾಯಾನುದಾನವನ್ನು ನೀಡಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ ದಿನಾಂಕ 04–09–2008 ರ ಪೂರ್ವದಲ್ಲಿ ಸಂಬಂಧಿಸಿದ ಶಾಲಾ ಕಾಲೇಜುಗಳ ಆಡಳಿತ ಮಂಡಳಿಯಿಂದ ನೇಮಕಗೊಂಡು ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರುಗಳಿಗೆ ಒಂದು ಬಾರಿಗೆ ಮೀಸಲಾತಿಯಲ್ಲಿ ವಿನಾಯಿತಿ ನೀಡಲು ತೀರ್ಮಾನಿಸಿದೆ. ಇಂತಹ ಸಂಸ್ಥೆಗಳಲ್ಲಿ ಭವಿಷ್ಯದಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ (ನಿವೃತ್ತಿ/ರಾಜೀನಾಮೆ/ಮರಣ/ಇತ್ಯಾದಿ) ಹುದ್ದೆಗಳನ್ನು ಮೀಸಲಾತಿ ಮಿತಿಯನ್ನು ಸಾಧಿಸುವವರೆಗೂ ಬ್ಯಾಕ್‌ಲಾಗ್ ಹುದ್ದೆಗಳೆಂದು ಕಡ್ಡಾಯವಾಗಿ ಪರಿಗಣಿಸಿ ನೇಮಕಾತಿ ಮಾಡಿಕೊಳ್ಳತಕ್ಕದ್ದು ಹಾಗೂ ಈಗಾಗಲೇ ಮೇಲ್ಕಂಡ ಅವಧಿಯಲ್ಲಿ ಖಾಸಗಿ ಆಡಳಿತ ಮಂಡಳಿಯವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ನೇಮಕಾತಿ ಮಾಡಿಕೊಂಡಿದ್ದರೆ ಅವರುಗಳನ್ನೇ ಮುಂದುವರೆಸತಕ್ಕದ್ದು ಎಂಬ ನಿಬಂಧನೆಯೊಂದಿಗೆ ಮೇಲ್ಕಂಡ ವಿನಾಯಿತಿ ನೀಡಲು ಉದ್ದೇಶಿಸಿದೆ. ಅದರಂತೆ, ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಇಡಿ 343 ಪಿಎಂಸಿ 2008, ಬೆಂಗಳೂರು, ದಿನಾಂಕ : 02.06.2011**

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಗಾಗಿ ದಿನಾಂಕ: 01.06.1987 ರಿಂದ 1992–93 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಿ, ಸತತವಾಗಿ ನಡೆಸುತ್ತಿರುವ ರಾಜ್ಯದಲ್ಲಿನ ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ ದಿನಾಂಕ 30–08–2007 ರ ಪೂರ್ವದಲ್ಲಿ ಮತ್ತು 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲಿಗೆ ಸಹಾಯಾನುದಾನವನ್ನು ನೀಡಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ ದಿನಾಂಕ 04.09.2008 ರ ಪೂರ್ವದಲ್ಲಿ ಸಂಬಂಧಿಸಿದ ಆಡಳಿತ ಮಂಡಳಿಯಿಂದ ನೇಮಕಗೊಂಡು ಸದರಿ ಸಂಸ್ಥೆಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರುಗಳಿಗೆ ಒಂದು ಬಾರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮೀಸಲಾತಿಯಲ್ಲಿ ವಿನಾಯಿತಿಯನ್ನು ನೀಡಿ, ಆದೇಶಿಸಿದೆ:-

ಷ ರ ತ್ತು ಗ ಳು:

(1) ದಿನಾಂಕ 01–06–1987 ರಿಂದ 1992–93 ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ ದಿನಾಂಕ 30.08.2007 ರ ಪೂರ್ವದಲ್ಲಿ ಮತ್ತು 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲಿಗೆ ಸಹಾಯಾನುದಾನವನ್ನು ನೀಡಲು ಸರ್ಕಾರದ ತೀರ್ಮಾನ ಆಗುವ ಮೊದಲು ಅಂದರೆ 04–09–2008 ರ ಪೂರ್ವದಲ್ಲಿ ಆಡಳಿತ ಮಂಡಳಿಯವರಿಂದ ನೇಮಕಗೊಂಡು ನಿರಂತರವಾಗಿ ಶಿಕ್ಷಕರುಗಳು ಸೇವೆ ಸಲ್ಲಿಸುತ್ತಿರಬೇಕು.

ಈ ರೀತಿ ನೇಮಕಗೆ
ಪೂರ್ವದಲ್ಲಿ ಇರ
ಒದಗಿಸಿರಬೇಕು, ಅ
ಮೂಲಕ ಸಂಬಳ
ಬಗ್ಗೆ ಪಾಖಲಾತಿಗ
) ನಿಗದಿತ ದಿನಾಂಕ
ಪ್ರಮಾಣ ಪತ್ರ ಕ
(4) ಈ ಶಾಲಾ–ಕಾ
ನಿಗದಿಪಡಿಸಿರುವ
ಮತ್ತು ವಯೋ
(5) ಸಂಬಂಧಿಸಿದ
ಭವಿಷ್ಯದಲ್ಲಿ
ಮೀಸಲಾತಿ
ನೇಮಕಾತಿ
(6) ಈ ಶಾಲ
ಅನುದಾನ
ಕಾರಣದಿಂ
ಕರಿಯರಾ
ಅಭ್ಯರ್ಥಿ
ಅಭ್ಯರ್ಥಿ
ಖಾಸಗಿ
ಅವರು
4. ಕರ್ನಾ
ಆಡಿಯಲ್ಲಿರುವ
ಹೊರಡಿಸಲಾ

ಈ ರೀತಿ ನೇಮಕಗೊಂಡ ಶಿಕ್ಷಕರ ನೇಮಕಾತಿಗಳನ್ನು ದಿನಾಂಕ 30–08–2007 ಹಾಗೂ 04–09–2008 ರ ಪೂರ್ವದಲ್ಲಿ ಇಲಾಖೆಯಿಂದ ಅನುಮೋದನೆ ಪಡೆದಿರಬೇಕು. ಇದಕ್ಕೆ ಖಚಿತವಾದ ಪುರಾವೆಗಳನ್ನು ಒದಗಿಸಿರಬೇಕು, ಅಂದರೆ ಸಂಬಳ ನೀಡಿದ ಬಗ್ಗೆ, ಲೆಕ್ಕಪುಸ್ತಕದಲ್ಲಿ ತೋರಿಸಿರುವ ಖರ್ಚು–ಅಥವಾ–ಬ್ಯಾಂಕ್ ಮೂಲಕ ಸಂಬಳ ಪಾವತಿ ಆಗಿದ್ದಲ್ಲಿ ಅದಕ್ಕೆ ಸಂಬಂಧಿಸಿದ ದಾಖಲೆಗಳು, ಆಡಿಟ್ ರಿಪೋರ್ಟ್‌ನಲ್ಲಿ ಖರ್ಚಿನ ಬಗ್ಗೆ ದಾಖಲಾತಿಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಬಹುದು.

(3) ನಿಗದಿತ ದಿನಾಂಕದಿಂದ ಹಿಂದಿನಿಂದ ನಿರಂತರ ಸೇವೆ ಸಲ್ಲಿಸುತ್ತಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ಅಧಿಕೃತ ಪ್ರಮಾಣ ಪತ್ರ ಹಾಗೂ ದೃಢೀಕೃತ ದಾಖಲೆಗಳನ್ನು ಹೊಂದಿರಬೇಕು.

(4) ಈ ಶಾಲಾ–ಕಾಲೇಜುಗಳಲ್ಲಿ ನೇಮಕವಾಗಿರುವ ಶಿಕ್ಷಕರುಗಳು ನೇಮಕವಾಗಿರುವ ಹುದ್ದೆಗೆ ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಜಾರಿಗೆ ಇದ್ದ ನಿಯಮಗಳನ್ವಯ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ಹೊಂದಿರತಕ್ಕದ್ದು.

(5) ಸಂಬಂಧಿಸಿದ ಸಂಸ್ಥೆಯಲ್ಲಿ ಅಗತ್ಯ ಪ್ರಮಾಣದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಇಲ್ಲದಿದ್ದಲ್ಲಿ, ಭವಿಷ್ಯದಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ (ನಿವೃತ್ತಿ/ರಾಜೀನಾಮೆ/ಮರಣ/ಇತ್ಯಾದಿ) ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಕಡ್ಡಾಯವಾಗಿ ಪರಿಗಣಿಸಿ ಮೀಸಲಾತಿ ಮಿತಿಯನ್ನು ಸಾಧಿಸುವವರೆಗೂ ನೇಮಕಾತಿ ಮಾಡಿಕೊಳ್ಳತಕ್ಕದ್ದು.

(6) ಈ ಶಾಲಾ–ಕಾಲೇಜುಗಳಲ್ಲಿ ಮೇಲ್ಕಂಡ ಅವಧಿಯಲ್ಲಿ ನೇಮಕಗೊಂಡ ಬೋಧಕ ಸಿಬ್ಬಂದಿಯನ್ನು ಅನುದಾನಕ್ಕೊಳಪಡಿಸುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಯ ಕೊರತೆ ಇರುವ ಕಾರಣದಿಂದ ಜೇಷ್ಠತೆಯಲ್ಲಿ ಕಿರಿಯರಾದವರನ್ನು ಅನುದಾನಕ್ಕೊಳಪಡಿಸದೇ ಕೈಬಿಡಲಾಗಿದ್ದು, ಅಂತಹ ಕಿರಿಯರಾದವರ ಸ್ಥಾನದಲ್ಲಿ ಈ ಆದೇಶದ ದಿನಾಂಕದೊಳಗಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಯನ್ನು ಈಗಾಗಲೇ ನೇಮಕ ಮಾಡಿಕೊಂಡಿದ್ದಲ್ಲಿ, ಅಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಯನ್ನು ಸೇವೆಯಿಂದ ತೆಗೆದುಹಾಕದೇ ಮುಂದುವರೆಸತಕ್ಕದ್ದು. ಹಾಗೂ ಮೇಲ್ಕಂಡ ಅವಧಿಯಲ್ಲಿ ಖಾಸಗಿ ಆಡಳಿತ ಮಂಡಳಿಯವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ನೇಮಕಾತಿ ಮಾಡಿಕೊಂಡಿದ್ದರೆ ಅವರುಗಳನ್ನೇ ಮುಂದುವರೆಸತಕ್ಕದ್ದು.

4. ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 17ರ ಉಪನಿಯಮ (2)ರ ಅಡಿಯಲ್ಲಿರುವ ಪರಂತುಕದ ವ್ಯಾಪ್ತಿಯೊಳಗೆ ಪ್ರಸ್ತುತ ಆದೇಶ ಬರುತ್ತದೆ ಹಾಗೂ ಅದರಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಪ್ರಭುಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (1000 ಪ್ರತಿಗಳು)

- 476 -

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 59 ಪಿಎಂಸಿ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 26.08.2008

## ತಿದ್ದೋಲೆ

ವಿಷಯ: ದಿ: 1.6.1987ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನ ನೀಡಲು ಆಸ್ಪದ ಕಲ್ಪಿಸುವ ಬಗ್ಗೆ

ಓದಲಾಗಿದೆ: ದಿ: 6.10.2007ರ ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006.

* * * * *

ಮೇಲೆ ಓದಲಾದ ದಿ: 6.10.2007ರ ಸರ್ಕಾರದ ಆದೇಶದ ಚೆಕ್‌ಲಿಸ್ಟ್‌ನ ನಮೂನೆ-5ರ ಕ್ರಮ ಸಂಖ್ಯೆ 25ರಲ್ಲಿನ ಈ ಕೆಳಕಂಡ ಭಾಗವನ್ನು ಈ ಮೂಲಕ ತೆಗೆದು ಹಾಕಲಾಗಿದೆ.

"ಆದಾಗ್ಯೂ ಈ ಷರತ್ತನ್ನು ಪೂರೈಸದೇ ಇರುವ ಪ್ರಕರಣಗಳಲ್ಲಿ ಸಂಬಂಧಿಸಿದ ಪದವಿಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಪರಿಶು ಪರಿಶೀಲಿಸಿ, ಸಹಾಯಾನುದನಕ್ಕೆ ಒಳಪಡಿಸಿದ 3ನೇ ವರ್ಷದಿಂದ ಅನ್ವಯಿಸುವುದು. ಅಂದರೆ ಅಂತಹ ಪ್ರಕರಣಗಳಲ್ಲಿ ಸಹಾಯಾನುದಾನಕ್ಕೆ ಒಳಪಡಿಸಿದ 3ನೇ ವರ್ಷದ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಮೇಲಿನಂತೆ ನಿಗದಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು ಎನ್ನುವ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವುದು"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
26/08/08
(ಎಸ್.ಹೆಚ್. ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಸರ್ಕಾರದ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

ಪ್ರತಿಯನ್ನು :-

1) [illegible]

2) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು– 3

3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.

4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ

5) ನಿರ್ದೇಶಕರು (ಪ್ರಾಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

6) ನಿರ್ದೇಶಕರು (ಪ್ರೌಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

7) ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ.

8) ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು

9) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ/ಉಪ ನಿರ್ದೇಶಕರುಗಳು/ ಕ್ಷೇತ್ರ ಶಿಕ್ಷಣಾಧಿಕಾರಿಗಳು } ಆಯಾಯ ವಿಭಾಗದ ನಿರ್ದೇಶಕರುಗಳ ಮೂಲಕ

10) ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ

11) ಎಲ್ಲಾ ಸಹ/ಉಪ/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.

12) ಸಂಪಾದಕರು, ಶಿಕ್ಷಣ ವಾರ್ತೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

13) ಶಾಖಾಧಿಕಾರಿ (ಸಾಮಾನ್ಯ-2), ಶಿಕ್ಷಣ ಇಲಾಖೆ, (ವಾರ್ಷಿಕ ಸಂಪುಟದಲ್ಲಿ ಪ್ರಕಟಿಸಲು)

14) ನೋಡಲ್ ಆಫೀಸರ್, ಶಿಕ್ಷಣ ಇಲಾಖೆ ಮಾಹಿತಿ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)

15) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

A / BG - GPO/ 2515 /WPP-47/ 2006 - 2008

ಸುವರ್ಣ ಕರ್ನಾಟಕ

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ



| ಭಾಗ - I | ಬೆಂಗಳೂರು, ಸೋಮವಾರ, ಅಕ್ಟೋಬರ್ ೧೫, ೨೦೦೭ (ಅಶ್ವಯುಜ ೨೩, ಶಕ ವರ್ಷ ೧೯೨೯) | ನಂ. ೧೯೦೭ |
|---|---|---|



## ಕರ್ನಾಟಕ ಸರ್ಕಾರದ ಸಚಿವಾಲಯ

### ಶಿಕ್ಷಣ ಸಚಿವಾಲಯ

ವಿಷಯ : ದಿ. 01.06.1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡಲು ಅಸ್ತದ ಕಲ್ಪಿಸುವ ಬಗ್ಗೆ.

ಓದಲಾಗಿದೆ :
(1) ದಿ. 13.09.2002ರ ಸರ್ಕಾರದ ಆದೇಶ ಸಂಖ್ಯೆ ಇಡಿ 65 ವಿವಿಧ 97
(2) ದಿ. 2.1.2006ರ ಸರ್ಕಾರದ ಆದೇಶ ಸಂಖ್ಯೆ ಇಡಿ 114 ಎಸ್‌ಇಡಿ 2004
(3) ದಿ. 03.07.2007ರ ಸರ್ಕಾರದ ಆದೇಶ ಸಂಖ್ಯೆ ಇಡಿ 240 ಎಸ್‌ಇಡಿ 2005
(4) ದಿ. 20.2.2004ರ ಸುತ್ತೋಲೆ ಸಂಖ್ಯೆ ಇಡಿ 110 ಎಸ್‌ಇಡಿ 2003 (ಭಾ-2)
(5) ದಿ. 7.5.2007ರ ಸರ್ಕಾರದ ಆದೇಶ ಸಂಖ್ಯೆ ಇಡಿ 83 ಐಪಿಯು 2003

* * *

ಪ್ರಸ್ತಾವನೆ :-

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಸಹಾಯಾನುದಾನ) ನಿಯಮಗಳು, 1999ರ ನಿಯಮ 3 ರನ್ವಯ, ದಿ. 1.6.1987 ರಂದು ಅಥವಾ ನಂತರ ಪ್ರಾರಂಭಿಸಲಾದ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಶ್ವತವಾಗಿ ಸಹಾಯಾನುದಾನವನ್ನು ಪಡೆಯಲು ಅರ್ಹವಾಗುವುದಿಲ್ಲವೆಂದು ನಿಗದಿಪಡಿಸಲಾಗಿದೆ. ತದನಂತರ, ಒಂದು ಅಪವಾದವನ್ನಾಗಿ (as an exception) ಮೇಲೆ (1) ರಲ್ಲಿ ಓದಲಾದ ಸರ್ಕಾರದ ದಿ. 13.9.2002ರ ಆದೇಶದನ್ವಯ, ಅದನ್ನು ಮೇಲೆ (2) ರಲ್ಲಿ ಓದಲಾದ ದಿ. 2.1.2006ರ ಹಾಗೂ ಮೇಲೆ (3) ರಲ್ಲಿ ಓದಲಾದ ದಿ. 3.7.2007ರ ಸರ್ಕಾರದ ಆದೇಶಗಳೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ದಿ. 1.6.1987ರಿಂದ 31.7.1992 ರ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅಸ್ತದವನ್ನು ಕಲ್ಪಿಸಲಾಗಿದೆ. ದಿ. 13.9.2002ರ ಮೇಲೆ ಉಲ್ಲೇಖಿಸಲಾದ ಆದೇಶದನ್ವಯ ಸಹಾಯಾನುದಾನ ಪಡೆಯಲು ಅರ್ಹವಾಗಲು ನಿಗದಿಪಡಿಸಲಾದ ಎಲ್ಲಾ ಷರತ್ತುಗಳನ್ನು ಸದರಿ ಸಂಸ್ಥೆಗಳ ಪೈಕಿ ಬಹುತೇಕ ಸಂಸ್ಥೆಗಳು ತಕ್ಷಣಕ್ಕೆ ಪೂರೈಸಲು ಸಾಧ್ಯವಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂತು. ಆದುದರಿಂದ, ವಿಶೇಷ ಪ್ರಕರಣವೆಂದು ಪರಿಗಣಿಸಿ, ಕೆಲವು ಷರತ್ತುಗಳನ್ನು ಪೂರೈಸಲು ಮೂರು ವರ್ಷಗಳ ಕಾಲಾವಕಾಶ ನೀಡಿ, ಉಳಿದ ಷರತ್ತುಗಳನ್ನು ಪೂರೈಸಿದ ಸದರಿ ಶಾಲೆಗಳಿಗೆ ಸಹಾಯಾನುದಾನ ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿತು. ಸಹಾಯಾನುದಾನವನ್ನು ಮಂಜೂರು ಮಾಡಿದ

D 71



ಮೂರು ವರ್ಷಗಳ ಒಳಗಾಗಿ ಎಲ್ಲಾ ಷರತ್ತುಗಳನ್ನು ಪೂರೈಸದೇ ಇದ್ದಲ್ಲಿ, ಆ ರೀತಿ ಮಂಜೂರು ಮಾಡಿದ ಸಹಾಯಾನುದಾನವನ್ನು ಹಿಂಪಡೆಯತಕ್ಕದ್ದೆಂಬ ಷರತ್ತಿಗೆ ಅದು ಒಳಪಟ್ಟಿತ್ತು. ಅದರಂತೆ ಮೇಲೆ (4) ರಲ್ಲಿ ಓದಲಾದ ದಿ. 20.2.2004 ರ ಸುತ್ತೋಲೆಯನ್ನು ಹೊರಡಿಸಲಾಯಿತು. ಇದಲ್ಲದೇ, ದಿನಾಂಕ 23-2-2007ರ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 138 ಟಿಪಿಯು 2006ರನ್ವಯ, ಅದನ್ನು ಮೇಲೆ (5) ರಲ್ಲಿ ಓದಲಾದ ದಿ. 7.5.2007ರ ಸರ್ಕಾರದ ಆದೇಶದೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ, ದಿನಾಂಕ 01-06-1987 ರಿಂದ 31-03-1992ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದ ಕಲ್ಪಿಸಲಾಗಿದೆ.

2. ಸಹಾಯಾನುದಾನದ ಸೌಲಭ್ಯವನ್ನು ಹೆಚ್ಚಿನ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸುವ ಕುರಿತು 2007-08ನೇ ಸಾಲಿಗೆ ಸಂಬಂಧಿಸಿದಂತೆ ಆಯವ್ಯಯದ ಭಾಷಣದಲ್ಲಿ ಈ ಕೆಳಗಿನಂತೆ ಘೋಷಿಸಲಾಗಿದೆ.

> “143. ದಿನಾಂಕ 01-06-1987 ರಿಂದ 01-07-1992 ರವರೆಗಿನ ನಡುವೆ ಆರಂಭವಾಗಿರುವ ಪರಿಶಿಷ್ಟ ಜಾತಿ / ಪಂಗಡಗಳ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರಿ ಅನುದಾನಕ್ಕೆ ಒಳಪಡಿಸಲಾಗಿದೆ. ಈ ಅನುದಾನ ಸೌಲಭ್ಯವನ್ನು ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ, 1992-93 ಮತ್ತು ಅದಕ್ಕೂ ಹಿಂದೆ ಆರಂಭವಾಗಿರುವ ಪ್ರಾಥಮಿಕ, ಹೈಸ್ಕೂಲ್ ಮತ್ತು ಪಿ.ಯು. ಕಾಲೇಜುಗಳಿಗೂ ಕೂಡ ವಿಸ್ತರಿಸಲಾಗುವುದು”.

3. 2007-08ನೇ ಸಾಲಿಗೆ ಸಂಬಂಧಿಸಿದ ಆಯವ್ಯಯದ ಭಾಷಣದಲ್ಲಿ ಹಿಂದಿನ ಕಂಡಿಕೆಯಲ್ಲಿ ವಿವರಿಸಲಾದ ಘೋಷಣೆಯನ್ವಯ ಪರಿಶೀಲಿಸಿ, ದಿ. 1.6.1987 ರಿಂದ 1992-93ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭಿಸಿ, ಸತತವಾಗಿ ನಡೆಸುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡುವ ಬಗ್ಗೆ ನಿರ್ಧರಿಸಿ, ಈ ಕೆಳಗಿನಂತೆ ಆದೇಶಿಸಿದೆ :-

**ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006,**
**ಬೆಂಗಳೂರು, ದಿನಾಂಕ : 06.10.2007**

4. ಪ್ರಸ್ತಾವನೆಯಲ್ಲಿ ವಿವರಿಸಿದ ಸನ್ನಿವೇಶಗಳ ಹಿನ್ನೆಲೆಯಲ್ಲಿ, ದಿ. 1.6.1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆ ಇಲ್ಲದೇ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳನ್ನು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸಲು ಈ ಮೂಲಕ ಆಸ್ಪದ ಕಲ್ಪಿಸಿದೆ :-

(1) ದಿನಾಂಕ 1-6-1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭಿಸಿ ಇಲ್ಲಿಯವರೆಗೆ ಯಾವುದೇ ವಿಚ್ಛಿನ್ನತೆ ಇಲ್ಲದೇ, ಸತತವಾಗಿ ನಡೆಸುತ್ತಿರತಕ್ಕದ್ದು. ಈ ಅವಧಿಯಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ವಿದ್ಯಾರ್ಥಿಗಳನ್ನು ಪಬ್ಲಿಕ್ ಪರೀಕ್ಷೆಗಳಿಗೆ ಕಳುಹಿಸಿರತಕ್ಕದ್ದು.

(2) ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಸದರಿ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸುತ್ತಿರಬೇಕು;

(3) ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ದಿನಾಂಕ 22-11-2006ರ ಆದೇಶ ಸಂಖ್ಯೆ ಇಡಿ 49 ಎಸ್‌ಇಪಿ 2006(P), ದಿನಾಂಕ 27-12-2006ರ ಆದೇಶ ಸಂಖ್ಯೆ ಇಡಿ 380 ಎಸ್‌ಇಪಿ 2006ಮತ್ತು ದಿನಾಂಕ 24-3-2007ರ ಆದೇಶ ಸಂಖ್ಯೆ ಇಡಿ 49 ಎಸ್‌ಇಪಿ 2006(ಭಾಗ), ಇವುಗಳ ಪ್ರಕಾರ ಸರ್ಕಾರ ನಿಗದಿಪಡಿಸಿದ ಶೇಕಡಾವಾರಿನ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ದಾಖಲಾತಿಯಲ್ಲಿ ಪ್ರಾತಿನಿಧ್ಯತೆಯನ್ನು ನೀಡಿರತಕ್ಕದ್ದು. (ಅಲ್ಪ ಸಂಖ್ಯಾತವೆಂದು ಪ್ರಮಾಣ ಪತ್ರ ಪಡೆದ/ಘೋಷಿಸಲ್ಪಟ್ಟ ಖಾಸಗಿ ಶಾಲೆಗಳು ಮತ್ತು

ಪದವಿ ಪೂರ್ವ ಕಾಲೇಜುಗಳು) ಸಂಬಂಧಿಸಿದಂತೆ ದಾಖಲಾತಿಯಲ್ಲಿ ಏರುಪೇರಿಗೆ ಸಂಬಂಧಿಸಿದ ಕಾರಣಗಳು ಅನ್ವಯವಾಗತಕ್ಕದ್ದಲ್ಲ;

(4) ಸಂಬಂಧಿಸಿದ ಶಾಲೆ ಅಥವಾ ಪದವಿಪೂರ್ವ ಕಾಲೇಜು ನೋಂದಣಿಯಾಗಿರತಕ್ಕದ್ದು ಹಾಗೂ ಮಾನ್ಯತೆ ಪಡೆದಿರತಕ್ಕದ್ದು ಮತ್ತು ಸಹಾಯಾನುದಾನ ನೀಡುವ ವರ್ಷದವರೆಗೆ ಚಾಲ್ತಿಯಲ್ಲಿರುವ ಮಾನ್ಯತೆಯ ನವೀಕರಣವನ್ನು ಪಡೆದಿರತಕ್ಕದ್ದು. ಆದಾಗ್ಯೂ, ಹಾಗೊಂದುವೇಳೆ, ಸಂಬಂಧಿಸಿದ ಶಾಲೆ/ಪದವಿಪೂರ್ವ ಕಾಲೇಜು ನಿರಂತರವಾಗಿ ನಡೆದಿದ್ದು, ಸಕಾರಣವಾಗಿ ಹಿಂದಿನ ಕೆಲವು ವರ್ಷಗಳ ಮಾನ್ಯತೆಯನ್ನು ಪಡೆಯದೇ ಇದ್ದರೂ, ಸಹಾಯಾನುದಾನಕ್ಕೆ ಒಳಪಡುವ ಸಮಯದಲ್ಲಿ (ಅಂದರೆ, ಇತ್ತೀಚಿನ) ಮಾನ್ಯತೆ ಪಡೆದಿದ್ದಲ್ಲಿ, ಅದರ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡುವ ಕುರಿತು ಪರಿಗಣಿಸಬಹುದು;

(5) ಸಂಬಂಧಿಸಿದ ಶಾಲೆ/ಪದವಿಪೂರ್ವ ಕಾಲೇಜು ಸರ್ಕಾರ ನಿಗದಿಪಡಿಸಿರುವಂತೆ ಕನಿಷ್ಠ ಮೂಲಭೂತ ಸೌಲಭ್ಯಗಳಾದ [illegible] ಪ್ರಯೋಗಾಲಯ ಮತ್ತು ಕುಡಿಯುವ ನೀರು, [illegible] ಮುಂತಾದ ಮೂಲಭೂತ ಸೌಲಭ್ಯಗಳನ್ನು ಕಡ್ಡಾಯವಾಗಿ [illegible] ಪ್ರತ್ಯೇಕವಾಗಿ ಆರೋಗ್ಯಕರವಾದ ಹಾಗೂ ನೈರ್ಮಲ್ಯ [illegible] ಪ್ರತ್ಯೇಕ ಶೌಚಾಲಯ ಮತ್ತು ಮೈದಾನದಲ್ಲಿಯೂ [illegible] ಮೂಲಭೂತ ಸೌಲಭ್ಯಗಳನ್ನು ಒದಗಿಸಿರತಕ್ಕದ್ದು;

ಆದಾಗ್ಯೂ ನಿಗದಿತ ಮೂಲಭೂತ ಸೌಲಭ್ಯಗಳ ಪೈಕಿ ಸ್ಥಳ, ಕಟ್ಟಡ ಹಾಗೂ ಆಟದ ಮೈದಾನಕ್ಕೆ ಸಂಬಂಧಿಸಿದಂತೆ ಕೊರತೆಗಳನ್ನು ಹೊಂದಿದ್ದು ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರಕರಣಗಳಲ್ಲಿ, ಈ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶವನ್ನು ನೀಡಬಹುದು ಹಾಗೂ ಮೂರು ವರ್ಷಗಳು ಮುಗಿಯುವುದರೊಳಗೆ ಈ ಸೌಲಭ್ಯಗಳನ್ನು ಒದಗಿಸಲು ವಿಫಲವಾದಲ್ಲಿ, ಸಹಾಯಾನುದಾನವನ್ನು ಸ್ಥಗಿತಗೊಳಿಸಲಾಗುವುದು ಎಂಬ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು.

(6) ಆಯಾಯಾ ಜಿಲ್ಲಾ ಶಿಕ್ಷಣ ಸಂಸ್ಥೆ ಸಂದರ್ಭಾನುಸಾರ, ಅದರ ಸಂಬಂಧಿಸಿದ ಪ್ರಾಥಮಿಕ ಶಾಲೆ ಅಥವಾ ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳಿಗೆ ಒದಗಿಸಲಾದ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನವನ್ನು (evaluation of the infrastructure) ಮಾಡತಕ್ಕದ್ದು. ಸರ್ಕಾರದ ಆದೇಶ/ನಿಯಮಗಳನ್ವಯ ನಿಗದಿತ ಮೂಲಭೂತ ಸೌಲಭ್ಯಗಳನ್ನು ಆಧಾರವಾಗಿಟ್ಟುಕೊಂಡು, ಆಯಾಯಾ ಶಾಲೆ / ಪದವಿ ಪೂರ್ವ ಕಾಲೇಜುಗಳಿಗೆ ಒದಗಿಸಲಾದ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನವನ್ನು ಮಾಡತಕ್ಕದ್ದು. ಈ ಮೌಲ್ಯಮಾಪನವನ್ನು ಗರಿಷ್ಠ 100 ಅಂಕಗಳಿಗಾಗಿ ಮಾಡತಕ್ಕದ್ದು. ಈ 100 ಅಂಕಗಳ ಪೈಕಿ, ಸಹಾಯಾನುದಾನ ಪಡೆಯಲು ಅರ್ಹವಾಗಲು ಸಂಬಂಧಿಸಿದ ಶಾಲೆ/ಪದವಿಪೂರ್ವ ಕಾಲೇಜು ಕನಿಷ್ಠ 60 ಅಂಕಗಳನ್ನು ಪಡೆಯತಕ್ಕದ್ದು. ಇದಕ್ಕಿಂತ ಕಡಿಮೆ ಅಂಕಗಳನ್ನು ಪಡೆಯುವ ಶಾಲೆ / ಪದವಿಪೂರ್ವ ಕಾಲೇಜು ಸಹಾಯಾನುದಾನ ಪಡೆಯಲು ಅರ್ಹವಾಗುವುದಿಲ್ಲ. ಈ ಉದ್ದೇಶಕ್ಕಾಗಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ, ನಿಗದಿತ ಮೂಲಭೂತ ಸೌಲಭ್ಯಗಳ ಪೈಕಿ ಪ್ರತಿಯೊಂದು ಸೌಲಭ್ಯಕ್ಕೆ ಸಂಬಂಧಿಸಿದಂತೆ ಗರಿಷ್ಠ ಅಂಕಗಳೆಷ್ಟು ಎಂಬುದನ್ನು ಈ ಆದೇಶಕ್ಕೆ ಲಗತ್ತಿಸಿದ ನಮೂನೆ-1 ರಲ್ಲಿನ ಚೆಕ್‌ಲಿಸ್ಟ್ ರೂಪದಲ್ಲಿ ನಿಗದಿಪಡಿಸಲಾಗಿದೆ. ಹಾಗೂ ಈ ಉದ್ದೇಶಕ್ಕಾಗಿ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿಗದಿತ ಮೂಲಭೂತ ಸೌಲಭ್ಯಗಳ ಪ್ರತಿಯೊಂದು ಅಂಶಕ್ಕೆ ಸಂಬಂಧಿಸಿದಂತೆ ಗರಿಷ್ಠ ಅಂಕಗಳನ್ನು ನಮೂನೆ-2 ರಲ್ಲಿನ ಚೆಕ್‌ಲಿಸ್ಟ್ ರೂಪದಲ್ಲಿ ನಿಗದಿಪಡಿಸಲಾಗಿದೆ. ಈ ಚೆಕ್‌ಲಿಸ್ಟ್‌ಗಳನ್ವಯವೇ ಮೌಲ್ಯಮಾಪನ ಮಾಡತಕ್ಕದ್ದು.

(7). ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಜಾರಿಯಲ್ಲಿರುವ ಸರ್ಕಾರದ ಆದೇಶಗಳು / ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1990ರ [illegible] (ಖಾಸಗಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ) ಮತ್ತು [illegible]ರನ್ವಯ (ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ) ಸರ್ಕಾರ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ಮಾಡಲಾದ ನೇಮಕಾತಿಗಳನ್ನು ಮಾತ್ರ ಸಹಾಯಾನುದಾನದ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದು. ಖಾಸಗಿ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಪದವಿಪೂರ್ವ ಶಿಕ್ಷಣ (ಶ್ರೇಣೀಕರಣ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ, ಇತ್ಯಾದಿ) ನಿಯಮಗಳು, 2006ರನ್ವಯ ನಿಗದಿಪಡಿಸಲಾದ ಸಿಬ್ಬಂದಿ ಮಾದರಿಯ ಪ್ರಕಾರ ಮಾಡಲಾದ ನೇಮಕಾತಿಗಳನ್ನು ಮಾತ್ರ ಸಹಾಯಾನುದಾನದ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದು. ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ದಾಖಲಾತಿ ಮತ್ತು ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು.

(8) ಖಾಸಗಿ ಶಾಲೆಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ನೇಮಕವಾದ ಶಿಕ್ಷಕರು ಮತ್ತು ಇತರ ಸಿಬ್ಬಂದಿ [illegible] ನಿಗದಿಪಡಿಸಿರುವ ನೇಮಕಾತಿ [illegible] ಮತ್ತು [illegible] ನೇಮಕಾತಿಯ ಸಮಯದಲ್ಲಿ [illegible] ಹೊಂದಿರತಕ್ಕದ್ದು.

(9) ನಿಗದಿತ ಸಿಬ್ಬಂದಿ ಮಾದರಿ ಮತ್ತು ನೇಮಕಾತಿ ಕಾರ್ಯವಿಧಾನದನ್ವಯ ನೇಮಕಾತಿಗಳಾಗಿರಬೇಕು. ಸರ್ಕಾರದ ಮೀಸಲಾತಿ ಆದೇಶಗಳು/[illegible] [illegible] ಪಾಲಿಸತಕ್ಕದ್ದು. ಆದಾಗ್ಯೂ ದಿನಾಂಕ 01-06-1995ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ಆದೇಶಗಳ ಉಲ್ಲಂಘನೆಯನ್ನು ದಿನಾಂಕ 21-04-1995ರ ಸರ್ಕಾರದ ಆದೇಶ ಸಂಖ್ಯೆ ಇಡಿ 237 ಎಸ್‌ಒಹೆಚ್ 94ರನ್ವಯ ಮನ್ನಾ ಮಾಡಲಾಗಿದೆ. ಆದಲ್ಲದೆ ದಿ. 1.6.95ರ ಪೂರ್ವದಲ್ಲಿ ನೇಮಕಾತಿ ಮಾಡಲಾಗಿದೆ ಎಂಬುವುದನ್ನು ಖಚಿತಪಡಿಸಿಕೊಳ್ಳಲು ದಿ. 21.4.95ರ ಸುತ್ತೋಲೆ ಸಂಖ್ಯೆ ಇಡಿ 237 ಟಿಪಿಯು 95ರ ಮೂಲಕ ವಿಧಿಸಿದ ಷರತ್ತುಗಳನ್ನು ಪೂರೈಸದ್ದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ನೇಮಕಾತಿಗಳಲ್ಲಿ ಆದ ನಷ್ಟವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ರಿಕ್ತವಾಗಿ ಅವರ ಪಾಲನ್ನು ಸರಿದೂಗಿಸಿಕೊಳ್ಳತಕ್ಕದ್ದೆಂಬ ಷರತ್ತನ್ನು ದಿ. 21.4.1995ರ ಸದರಿ ಆದೇಶದನ್ವಯ ವಿಧಿಸಲಾಗಿದೆ. ದಿನಾಂಕ 20-06-1995ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95 ಕಂಡಿಕೆ-12(ಬಿ)ರನ್ವಯ ಅಲ್ಪಸಂಖ್ಯಾತವೆಂದು ಘೋಷಿಸಲ್ಪಟ್ಟ ಶಾಲೆಗಳಿಗೆ ಸಂಬಂಧಿಸಿದಂತೆ ನೇಮಕಾತಿಯಲ್ಲಿ ಮೀಸಲಾತಿ ಅನ್ವಯಿಸುವುದಿಲ್ಲ.

(10) ಈ ಸಂಸ್ಥೆಗಳಲ್ಲಿ ಮಾಡಿಕೊಂಡ ನೇಮಕಾತಿಗಳಿಗಾಗಿ ಸಿಬ್ಬಂದಿ ಮಾದರಿಗಿಂತ ಕಡಿಮೆ ಇಲ್ಲದೆ ಮತ್ತು ಅದಕ್ಕಿಂತ ಹೆಚ್ಚಿಲ್ಲದೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಸಿಬ್ಬಂದಿ ಮಾದರಿಗಿಂತ ಕಡಿಮೆ ಸಿಬ್ಬಂದಿಯೊಂದಿಗೆ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳು ಸರಿಯಾದ ಶಿಕ್ಷಣ ನೀಡಲು ಸಾಧ್ಯವಿಲ್ಲ. ಆದ್ದರಿಂದ ಸಿಬ್ಬಂದಿ ಮಾದರಿ ಪ್ರಕಾರ ಎಲ್ಲಾ ಹುದ್ದೆ ಸಿಬ್ಬಂದಿಗಳನ್ನು ಒಟ್ಟಿಗೆ ಅನುಮೋದನೆ ನೀಡಬೇಕು. ಕಂತುಗಳಲ್ಲಿ ಅನುಮೋದನೆ ನೀಡಬಾರದೆಂದು ಸೂಚಿಸಿದೆ. ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆಯಾಗದಿದ್ದಲ್ಲಿ ಸದರಿ ನೇಮಕಾತಿಗಳಿಗೆ ಈ ಲೇಖನ ಕಂಡಿಕೆ (5) ರಲ್ಲಿ ಉಲ್ಲೇಖಿಸಲಾದ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಮುಂದಿಟ್ಟು ಅದಕ್ಕೆ ಅದರ ಅನುಮೋದನೆಯನ್ನು ಈಗ ಪಡೆದು, ತದನಂತರ ನೇಮಕಾತಿ ಅನುಮೋದನಾ ಆದೇಶವನ್ನು ಹೊರಡಿಸತಕ್ಕದ್ದು.

(11) ಜಿಲ್ಲಾ ಪರಿಶೀಲನಾ ಸಮಿತಿಯು ಸಹಾಯಾನುದಾನಕ್ಕೆ ಒಳಪಡಿಸಲು ಪ್ರಸ್ತಾವನೆ ಸಲ್ಲಿಸುವಾಗ ಸಿಬ್ಬಂದಿ [illegible]

468

ಪ್ರಕರಣಗಳನ್ನು ಅನುಮೋದಿಸಲು ಪರಿಗಣಿಸತಕ್ಕದ್ದು. ತುಂಡು (Piecemeal) ಆಧಾರದ ಮೇಲೆ ಹಂತ ಹಂತವಾಗಿ ಅನುಮೋದಿಸಬಾರದು ಮತ್ತು ಪ್ರಸ್ತಾವನೆ ಕಳುಹಿಸಬಾರದು. ಆದಾಗ್ಯೂ "ಡಿ" ಗುಂಪಿನ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಿತವ್ಯಯ ಆದೇಶಗಳಿರುವುದರಿಂದ ಮಿತವ್ಯಯ ಆದೇಶಗಳನ್ನು ಸಡಿಲಿಸುವವರೆಗೆ "ಡಿ" ಗುಂಪು ನೌಕರರ ನೇಮಕಾತಿಯನ್ನು ಅನುಮೋದಿಸಬಾರದು ಹಾಗೂ ಪ್ರಸ್ತಾವನೆ ಸಲ್ಲಿಸಬಾರದು. ನಿಗದಿತ ಸಿಬ್ಬಂದಿ ಮಾದರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅನುಮೋದನೆ ನೀಡಿದಲ್ಲಿ, ಅಂತಹವರು ಮುಂದೆ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇರುವುದರಿಂದ ಸಿಬ್ಬಂದಿ ಮಾದರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅನುಮೋದಿಸಬಾರದು.

(12) ಆಡಳಿತ ಮಂಡಳಿಗೆ ಸಂಬಂಧಿಸಿದಂತೆ ಯಾವುದೇ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ, ಅಂತಹ ಶಾಲೆಯ/ಪದವಿಪೂರ್ವ ಕಾಲೇಜಿನ ನೌಕರರು ಸಹಾಯಾನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ

(13) ಸಂಬಂಧಿಸಿದ ಶಾಲೆಯ/ ಕಾಲೇಜಿನ, ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯಲ್ಲಿನ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಕಡಿಮೆ ಇರತಕ್ಕದ್ದಲ್ಲ. ಅದೇ ರೀತಿ, ಸಂಬಂಧಿಸಿದ ಖಾಸಗಿ ಪದವಿಪೂರ್ವ ಕಾಲೇಜಿನ, ದ್ವಿತೀಯ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿನ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಕಡಿಮೆ ಇರತಕ್ಕದ್ದಲ್ಲ ;

(14) ಕರ್ನಾಟಕ ಸಂಘಗಳ ನೊಂದಣಿ ನಿಯಮಾವಳಿಯಲ್ಲಿ ನಮೂದಿಸಿರುವ ಅವಕಾಶಗಳ ಪ್ರಕಾರ ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಹಾಗೂ ಸಂಬಂಧಿಸಿದ ಆಯುಕ್ತರಿಗೆ ಮಾಹಿತಿಗಾಗಿ ಪಿ.ಡಿ.ಆರ್. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು ಸಲ್ಲಿಸತಕ್ಕದ್ದು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು);

(15) (ಅ) ಸಹಾಯಾನುದಾನ ಕೋರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಸಹಾಯಾನುದಾನ ಪಡೆಯಲು ಅರ್ಹತೆ ಹೊಂದಿದೆಯೇ? ಅಥವಾ ಇಲ್ಲವೇ? ಹಾಗೂ ಅದರಲ್ಲಿನ ನೇಮಕಾತಿಗಳನ್ನು ನಿಗದಿತ ಕಾರ್ಯ ವಿಧಾನದ ಪ್ರಕಾರ/ ನಿಯಮಗಳನ್ವಯ ಮಾಡಲಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಲು ಪ್ರಸ್ತಾವನೆಗಳನ್ನು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ನಮೂನೆ-3 ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ ಇಟ್ಟು, ಅದರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸನ್ನು ಪಡೆಯತಕ್ಕದ್ದು-

| | | | |
|---|---|---|---|
| (i) | ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ | : | ಅಧ್ಯಕ್ಷರು |
| (ii) | ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ನೊಂದಣಾಧಿಕಾರಿ | : | ಸದಸ್ಯರು |
| (iii) | ಸಂಬಂಧಿಸಿದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, | : | ಸದಸ್ಯ ಕಾರ್ಯದರ್ಶಿ |

(ಆ) ಅದೇ ರೀತಿ, ಸಹಾಯಾನುದಾನ ಕೋರುವ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಮುಂದೆ ನಿಗದಿತ ಚೆಕ್‌ಲಿಸ್ಟ್‌ನಲ್ಲಿ ಇಟ್ಟು, ಅದರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸು ಪಡೆಯತಕ್ಕದ್ದು-

467



(i) ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿ : ಅಧ್ಯಕ್ಷರು

(ii) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ನೋಂದಣಾಧಿಕಾರಿ : ಸದಸ್ಯರು

(iii) ಸಂಬಂಧಪಟ್ಟ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು : ಸದಸ್ಯ ಕಾರ್ಯದರ್ಶಿ

ಈಗಾಗಲೇ, ಮೇಲೆ ಹೇಳಿದಂತೆ, ಸದರಿ ಸಮಿತಿಗಳು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು-

(ಎ) ಸಹಾಯಾನುದಾನ ಕೋರುವ ಖಾಸಗಿ ಶಾಲೆ / ಪದವಿ ಪೂರ್ವ ಕಾಲೇಜು ಸಹಾಯನುದಾನ ಪಡೆಯಲು ಅರ್ಹತೆ ಹೊಂದಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ

(ಬಿ) ಅದರಲ್ಲಿನ ನೇಮಕಾತಿಗಳನ್ನು ನಿಗದಿತ ಕಾರ್ಯ ವಿಧಾನದ ಪ್ರಕಾರ /ನಿಯಮಗಳನ್ವಯ ಮಾಡಲಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ, ತನ್ನ ನಿರ್ದಿಷ್ಟ ಹಾಗೂ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸು ನೀಡುವುದು, ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದ ವಿವರಗಳನ್ನು ಈ ಆದೇಶಕ್ಕೆ ಲಗತ್ತಿಸಿದ ನಮೂನೆ-4 ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ ಒದಗಿಸತಕ್ಕದ್ದು ; ಮತ್ತು

(ಸಿ) ಅಗತ್ಯವಿದ್ದಲ್ಲಿ, ಮೇಲಿನ ಉಪ ಕಂಡಿಕೆ (10)ರಲ್ಲಿ ಉಲ್ಲೇಖಿಸಲಾದಂತೆ ನೇಮಕಾತಿಗಳನ್ನು ಅನುಮೋದಿಸುವ ಕಾರ್ಯವನ್ನು ನಿರ್ವಹಿಸುವುದು.

ಈ ಉದ್ದೇಶಕ್ಕಾಗಿ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಮೂನೆ-5 ರಲ್ಲಿನ ಚೆಕ್ ಲಿಸ್ಟ್‌ಗಳನ್ನು ಉಪಯೋಗಿಸತಕ್ಕದ್ದು.

(16) ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ, ಸೇವಾ ಸೌಲಭ್ಯಗಳು ಇತ್ಯಾದಿಗಳ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಸಹಾಯಾನುದಾನ ಇಲ್ಲದ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005, ಈ ನಿಯಮಗಳನ್ನು ಸರ್ಕಾರ ರಚಿಸಿದ್ದು, ಅವುಗಳನ್ನು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಕಟ್ಟು ನಿಟ್ಟಾಗಿ ಪಾಲಿಸಬೇಕಾಗಿದೆ. ಇದಲ್ಲದೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 92ರನ್ವಯ, ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೇ, ಸೇವೆಯಿಂದ ವಜಾ ಮಾಡಲು ಅಥವಾ ತೆಗೆದುಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಆಡಳಿತ ಮಂಡಳಿ ಅದರ ನೌಕರನ ವಿರುದ್ಧ ಕ್ರಮ ತೆಗೆದುಕೊಂಡಿದ್ದಲ್ಲಿ ಅಥವಾ ಅದರ ನೌಕರರಿಗೆ 2005ರ ಸದರಿ ನಿಯಮಗಳನ್ವಯ ದೊರಕಿಸಬೇಕಾದ ಸೇವಾ ಸೌಲಭ್ಯಗಳನ್ನು ದೊರಕಿಸದೇ, ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ ಖಾಸಗಿ ಶಿಕ್ಷಣ ಸಂಸ್ಥೆ ಸಹಾಯಾನುದಾನಕ್ಕಾಗಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ಆ ಉಲ್ಲಂಘನೆಯ ಕಾರಣಕ್ಕಾಗಿ ತಿರಸ್ಕರಿಸತಕ್ಕದ್ದು. ಅದೇ ರೀತಿ, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯನುದಾನ ಇತ್ಯಾದಿ) ನಿಯಮಗಳು, 2006ನ್ನು ಅಥವಾ ಅಧಿನಿಯಮವನ್ನು ಉಲ್ಲಂಘಿಸಿ, ಸಂಬಂಧಿಸಿದ ಶಿಕ್ಷಣ ಸಂಸ್ಥೆ ಅದರ ನೌಕರರ ವಿರುದ್ಧ ಕ್ರಮ ತೆಗೆದುಕೊಂಡಿದ್ದಲ್ಲಿ ಅವರಿಗೆ ಆ ನಿಯಮಗಳ ಪ್ರಕಾರ ಅಥವಾ ಇತರೆ ಸಂಬಂಧಿಸಿದ ನಿಯಮಗಳ ಪ್ರಕಾರ ದೊರಕಿಸಬೇಕಾದ ಸೇವಾ ಸೌಲಭ್ಯಗಳನ್ನು ದೊರಕಿಸದೇ, ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ ಶಿಕ್ಷಣ ಸಂಸ್ಥೆ ಸಹಾಯಾನುದಾನ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಆ ಉಲ್ಲಂಘನೆಯ ಕಾರಣಕ್ಕಾಗಿ ಅದನ್ನು ತಿರಸ್ಕರಿಸತಕ್ಕದ್ದು.

5. **ಸಹಾಯಾನುದಾನವನ್ನು ಕೋರುವ ಕಾರ್ಯವಿಧಾನ** :- ಸಂಬಂಧಿಸಿದ ಆಡಳಿತ ಮಂಡಳಿ, ಸದರಿ 18 ಅಂಶಗಳನ್ನು ಒಳಗೊಂಡ, ಈ ಆದೇಶಕ್ಕೆ ಲಗತ್ತಿಸಿದ ಚೆಕ್‌ಲಿಸ್ಟ್‌ನ ನಮೂನೆಗಳಲ್ಲಿ ಸಹಾಯಾನುದಾನ ಕೋರುವ ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ, ಸಂದರ್ಭಾನುಸಾರ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಅಥವಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸತಕ್ಕದ್ದು. ಪ್ರತಿಯೊಂದು ನೇಮಕಾತಿಗೆ

ಸಂಬಂಧಿಸಿದ ವಿವರಗಳನ್ನು ಈ ಆದೇಶಕ್ಕೆ ಲಗತ್ತಿಸಿದ ಚೆಕ್‌ಲಿಸ್ಟ್‌ನ <u>ನಮೂನೆ-4</u> ರಲ್ಲಿ ಸಲ್ಲಿಸತಕ್ಕದ್ದು. ಉಪ ನಿರ್ದೇಶಕರು, ಆ ಪ್ರಸ್ತಾವನೆಯನ್ನು ಪರಿಶೀಲಿಸಿ, ಕಂಡಿಕೆ-4ರ ಉಪ ಕಂಡಿಕೆ (ಬಿ)ರಲ್ಲಿ ಉಲ್ಲೇಖಿಸಲಾದ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಮುಂದಿಟ್ಟು, ಸಮಿತಿಯ ಸ್ಪಷ್ಟ ಹಾಗೂ ನಿರ್ದಿಷ್ಟ ಅಭಿಪ್ರಾಯ / ಶಿಫಾರಸ್ಸನ್ನು ಪಡೆದು, ಪ್ರಸ್ತಾವನೆಯನ್ನು ಸ್ವೀಕರಿಸಿದ 30 ದಿವಸಗಳ ಒಳಗಾಗಿ ಉಪ ನಿರ್ದೇಶಕರು ಅದನ್ನು ಸದರಿ ಚೆಕ್‌ಲಿಸ್ಟ್‌ಗಳಲ್ಲಿಯೇ, ಸಂಬಂಧಿಸಿದ ಆಯುಕ್ತರಿಗೆ ಕಳುಹಿಸತಕ್ಕದ್ದು. ಆಯುಕ್ತರು ಅದನ್ನು ಪರಿಶೀಲಿಸಿ, ಅವರ ಸ್ಪಷ್ಟ ಹಾಗೂ ನಿರ್ದಿಷ್ಟ ಅಭಿಪ್ರಾಯ / ಶಿಫಾರಸ್ಸಿನೊಂದಿಗೆ ಸದರಿ ಚೆಕ್‌ಲಿಸ್ಟ್‌ಗಳ ನಮೂನೆಯಲ್ಲಿಯೇ, ಅದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಒಂದೊಂದು ಶಾಲಾ ಕಾಲೇಜಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವ ಬದಲು, ಆದಷ್ಟು ಮಟ್ಟಿಗೆ, ಅಂತಹ ಪ್ರಸ್ತಾವನೆಗಳನ್ನು ಒಟ್ಟಾಗಿ, ಸಂಬಂಧಿಸಿದ ಆಯುಕ್ತರು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಸರ್ಕಾರದ ಹಂತದಲ್ಲಿ ಒಂದೊಂದು ಶಾಲಾ/ಕಾಲೇಜಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಆದೇಶಗಳನ್ನು ಹೊರಡಿಸುವ ಬದಲು, ಆದಷ್ಟು ಮಟ್ಟಿಗೆ, ಒಟ್ಟಾಗಿ ಸ್ವೀಕರಿಸಲಾದ ಅಂತಹ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಒಂದೇ ಸರ್ಕಾರಿ ಆದೇಶದನ್ವಯ ಅನುಮೋದನೆಯನ್ನು ನೀಡತಕ್ಕದ್ದು.

6. ದಿ. 1.6.1987ರಿಂದ 1992-93ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು (ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳೂ ಒಳಗೊಂಡಂತೆ) ಸಹಾಯಾನುದಾನಕ್ಕೆ ಅರ್ಹವಾಗಲು ಮೇಲಿನ ಕಂಡಿಕೆ 4 ರಲ್ಲಿ ನಮೂದಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು.

7. ದಿನಾಂಕ 01-06-1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆಯಿಲ್ಲದೆ ಸತತವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳು ಸಹಾಯಾನುದಾನಕ್ಕೆ ಅರ್ಹವಾಗಲು, ಮೇಲೆ (1) ರಲ್ಲಿ ಓದಲಾದ ದಿನಾಂಕ 13-9-2002ರ ಸರ್ಕಾರದ ಆದೇಶ ಸಂಖ್ಯೆ ಇಡಿ 65 ವಿವಿಧ 95, ಇದನ್ನು ಮೇಲೆ (4) ರಲ್ಲಿ ಓದಲಾದ ದಿನಾಂಕ 20-2-2004ರ ತಿದ್ದುಪಡಿ ಸಂಖ್ಯೆ ಇಡಿ 110 ಎಸ್‌ಇಪಿ 2003 ರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು.

8. ದಿ. 1.6.1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆ ಇಲ್ಲದೇ ಸತತವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳು ಸಹಾಯಾನುದಾನಕ್ಕೆ ಅರ್ಹವಾಗಲು, ಮೇಲೆ (5) ರಲ್ಲಿ ಓದಲಾದ ದಿ. 7.5.2007ರ ಸರ್ಕಾರಿ ಆದೇಶ ಸಂಖ್ಯೆ ಇಡಿ 63 ಟಿಪಿಯು 2003 ರನ್ವಯ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಪೂರೈಸತಕ್ಕದ್ದು.

9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಸದರಿ ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಸಂಸ್ಥೆಗಳು ಸಲ್ಲಿಸುವ ಸಲುವಾಗಿ ಹಾಗೂ ಅವುಗಳನ್ನು ಪರಿಶೀಲಿಸುವ ಸಲುವಾಗಿ ಈಗಾಗಲೇ ನಿಗದಿಪಡಿಸಲಾದ ಚೆಕ್‌ಲಿಸ್ಟ್‌ಗಳನ್ನೆ ಉಪಯೋಗಿಸತಕ್ಕದ್ದು.

10. ಈ ಆದೇಶವನ್ನು ಆರ್ಥಿಕ ಇಲಾಖೆಯು ದಿ. 25.5.2007 ರ ಟಿಪ್ಪಣಿ ಸಂಖ್ಯೆ ಆಇ 493/ವೆಚ್ಚ-8/2007 ರಲ್ಲಿ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯ ದಿ. 31.5.2007ರ ಟಿಪ್ಪಣಿ ಸಂಖ್ಯೆ ಯೋಇ/65/ಜಶ/2007ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಇಡಿ 59 ಪಿಎಂಸಿ 2008

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ಹೆಚ್. ಪಡಸಲಗಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

## ಚೆಕ್‌ಲಿಸ್ಟ್‌ನ ನಮೂನೆ -1

### ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಮೂಲಭೂತ ಸೌಲಭ್ಯಗಳನ್ನು ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಒದಗಿಸಿರುವ ಬಗ್ಗೆ ಸಹಾಯಾನುದಾನ ಪಡೆಯಲು ಅರ್ಹತೆ ನಿರ್ಧರಿಸಲು ಮೌಲ್ಯಮಾಪನವನ್ನು ಮಾಡಲು ಉಪಯೋಗಿಸತಕ್ಕ ಚೆಕ್‌ಲಿಸ್ಟ್‌ನ ನಮೂನೆ

| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ ಅಂಕಗಳು |
|---|---|---|
| 1. | ಆರ್.ಸಿ.ಸಿ./ಪಕ್ಕಾ ಕಟ್ಟಡ ಇರತಕ್ಕದ್ದು. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಕನಿಷ್ಠ 8 ಚದರ ಅಡಿ ಜಾಗ (Carpet Area) ಹಾಗೂ ಪ್ರತಿಯೊಂದು ತರಗತಿ ಕೊಠಡಿಯ ಅಳತೆ ಕನಿಷ್ಠ 380 ಚದರ ಅಡಿ ಇರತಕ್ಕದ್ದು. 380 ಚದರ ಅಡಿಗಿಂತ ಕಡಿಮೆ ಅಳತೆ ಇದ್ದಲ್ಲಿ, ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ.<br><br>ಪ್ರತಿಯೊಂದು ವಿಭಾಗಕ್ಕಾಗಿ ಒಂದು ಕೊಠಡಿ ಇರತಕ್ಕದ್ದು.<br><br>ಕಟ್ಟಡದ ಬುನಾದಿ ಗಟ್ಟಿಯಾಗಿರತಕ್ಕದ್ದು ಹಾಗೂ ಪಕ್ಕಾ ಗೋಡೆಗಳು ಹೊಂದಿರತಕ್ಕದ್ದು. ಛಾವಣಿಯು ಆರ್.ಸಿ.ಸಿ. ಅಥವಾ ಸಿಮೆಂಟ್ ಅಥವಾ ಹೆಂಚು, ಇದರಿಂದ ಕಟ್ಟಿರತಕ್ಕದ್ದು.<br><br>ಪ್ರತಿಯೊಂದು ಕೊಠಡಿಯಲ್ಲಿ ಸಾಕಷ್ಟು ಬೆಳಕು, ಗಾಳಿ ಮತ್ತು ಅಗ್ನಿನಿರೋಧಕ ಯಂತ್ರಗಳು ಇರತಕ್ಕದ್ದು. ..........<br><br>ಕಟ್ಟಡದ ಹಾಗೂ ಸಂಪೂರ್ಣ ನಿವೇಶನದ ಛಾಯಾಚಿತ್ರವನ್ನು ಹಾಗೂ ಕಟ್ಟಡದ ಪ್ಲಾನ್ ಮತ್ತು ನಿವೇಶನದ ಪ್ಲಾನ್‌ರ ಪ್ರತಿಗಳನ್ನು ಲಗತ್ತಿಸತಕ್ಕದ್ದು. | 40 ಅಂಕಗಳು |
| | ಮುಖ್ಯೋಪಾಧ್ಯಾಯರು, ಸಿಬ್ಬಂದಿ ಮತ್ತು ಕಚೇರಿಗಾಗಿ ಪ್ರತ್ಯೇಕ ಕೊಠಡಿಗಳು ಇರತಕ್ಕದ್ದು (ಒಟ್ಟು 3 ಕೊಠಡಿಗಳು) ....................<br><br>ಪ್ರತಿಯೊಂದು ಕೊಠಡಿಯ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | (ಗರಿಷ್ಠ 6 ಅಂಕಗಳು) ಸದರಿ 6 ಅಂಕಗಳ ಪೈಕಿ ಪ್ರತಿ ಕೊಠಡಿಗಾಗಿ 2 ಅಂಕಗಳು. (ಒಟ್ಟು 6 ಅಂಕಗಳು) |
| 2. | <u>ಗ್ರಂಥಾಲಯ/ಓದುವ ಸ್ಥಳಾವಕಾಶ</u><br>(ಅ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಠ 500 ಪುಸ್ತಕಗಳನ್ನೊಳಗೊಂಡ ಶಿಕ್ಷಕರ ಗ್ರಂಥಾಲಯ ........ | 15 ಅಂಕಗಳು |
| | (ಆ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಠ 500 ಪುಸ್ತಕಗಳನ್ನು ಒಳಗೊಂಡ ವಿದ್ಯಾರ್ಥಿಗಳ ಗ್ರಂಥಾಲಯ. ಅದರಲ್ಲಿ ಮ್ಯಾಪ್, ಸಿಡಿ ಮತ್ತು ಚಾರ್ಟ್‌ಗಳು ಒಳಗೊಂಡಿರಬಹುದು. ...............<br>ಗ್ರಂಥಾಲಯ ಕೊಠಡಿಯ ಹಾಗು ಪುಸ್ತಕಗಳ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | 15 ಅಂಕಗಳು |
| 3. | ಕ್ರೀಡಾ ಕೊಠಡಿ .......... | 3 ಅಂಕಗಳು |
| 4. | ಪ್ರಯೋಗಾಲಯದ ಕೊಠಡಿ<br>ಕನಿಷ್ಠ 380 ಚ.ಅ. ಅಳತೆಯ ಪ್ರತ್ಯೇಕ ಪ್ರಯೋಗಾಲಯ ಕೊಠಡಿ. .......<br><br>ಪ್ರಯೋಗಾಲಯದ ಕೊಠಡಿಯ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು.<br>(ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಇದು ಅನ್ವಯಿಸತಕ್ಕದ್ದಲ್ಲ). | 3 ಅಂಕಗಳು |
| 5. | ಹೆಣ್ಣುಮಕ್ಕಳಿಗಾಗಿ ಶೌಚಾಲಯ<br>ಹೆಣ್ಣುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು. ..........<br><br>ಹೆಣ್ಣುಮಕ್ಕಳ ಶೌಚಾಲಯದ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | 8 ಅಂಕಗಳು |

| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ ಅಂಕಗಳು |
|---|---|---|
| 6. | ಗಂಡುಮಕ್ಕಳಿಗಾಗಿ ಶೌಚಾಲಯ<br>ಗಂಡುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು. . . . . . . . . . . . .<br>ಗಂಡುಮಕ್ಕಳ ಶೌಚಾಲಯದ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | 7 ಅಂಕಗಳು |
| 7. | ನೀರಿನ ಟ್ಯಾಂಕ್ (ಸ್ಥಿರವಾದ ಸಿಮೆಂಟ್ ಟ್ಯಾಂಕ್ ಅಥವಾ ಸಿಂಥಟಿಕ್ ಫೈಬರ್ ಟ್ಯಾಂಕ್ ಇತ್ಯಾದಿ)<br>50 ರಿಂದ 100 ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಠ 500 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. 100 ಕ್ಕಿಂತ ಹೆಚ್ಚು ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಠ 1000 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. . . . . . .<br>ನೀರಿನ ಟ್ಯಾಂಕ್‌ನ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು | 10 ಅಂಕಗಳು |
| 8. | ಪೀಠೋಪಕರಣ ಮತ್ತು ಕಪ್ಪುಹಲಗೆ<br>(ಅ) ಹಾಜರಾದ ಎಲ್ಲಾ ಮಕ್ಕಳಿಗಾಗಿ ಕುಳಿತುಕೊಳ್ಳಲು ಇದ್ದಲ್ಲಿ_<br>(ಆ) ಹಾಜರಾದ ಅರ್ಧದಷ್ಟು ಮಕ್ಕಳಿಗೆ ಮಾತ್ರ ಕುಳಿತುಕೊಳ್ಳಲು ಇದ್ದಲ್ಲಿ . . . . . . . . .<br>(ಇ) ಹಾಜರಾದ ಒಂದನೇ ನಾಲ್ಕು ಭಾಗದಷ್ಟು ಮಕ್ಕಳಿಗೆ ಮಾತ್ರ ಕುಳಿತುಕೊಳ್ಳಲು ಇದ್ದಲ್ಲಿ . . . . . . . . . . .<br>(ಈ) (ಇ) ಗಿಂತ ಕಡಿಮೆ ಇದ್ದಲ್ಲಿ . . . . . . . . . . .<br>(ಪ್ರತಿಯೊಂದು ಕೊಠಡಿಯಲ್ಲಿರುವ ಪೀಠೋಪಕರಣಗಳ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು.) | (ಗರಿಷ್ಠ 10 ಅಂಕಗಳು)<br>10 ಅಂಕಗಳು<br>ಸದರಿ 10 ಅಂಕಗಳ ಪೈಕಿ 5 ಅಂಕಗಳು ಮಾತ್ರ<br>ಸದರಿ 10 ಅಂಕಗಳ ಪೈಕಿ 2 ಅಂಕಗಳು ಮಾತ್ರ<br>ಯಾವುದೇ ಅಂಕಗಳು ಇಲ್ಲ |
| 9. | ಪಾಠೋಪಕರಣ, ಕಲಿಕಾ ಮತ್ತು ಆಟೋಪಕರಣ<br>(ಅ) ರೂ. 6,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು ಇದ್ದಲ್ಲಿ . . . .<br>(ಆ) ರೂ. 3,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು, ಆದರೆ ರೂ. 6,000/- ಕಡಿಮೆ ಇದ್ದಲ್ಲಿ.. .<br>(ಇ) ರೂ. 3,000/- ಕ್ಕಿಂತ ಕಡಿಮೆ ಬೆಲೆಯ ಉಪಕರಣಗಳು.. | (ಗರಿಷ್ಠ 5 ಅಂಕಗಳು)<br>5 ಅಂಕಗಳು<br>ಸದರಿ 5 ಅಂಕಗಳ ಪೈಕಿ 2 ಅಂಕಗಳು<br>ಯಾವುದೇ ಅಂಕಗಳು ಇಲ್ಲ. |
| 10. | ಆಟದ ಮೈದಾನ<br>(ಅ) ವಾಲಿಬಾಲ್ ಕೋರ್ಟಿನ ಎರಡು ಪಟ್ಟು ಅಳತೆಯ ಅಥವಾ ಅದಕ್ಕಿಂತ ಹೆಚ್ಚಿನ ಆಟದ ಮೈದಾನ ಇದ್ದಲ್ಲಿ . . .<br>(ಆ) ಒಂದು ವಾಲಿಬಾಲ್ ಕೋರ್ಟಿನ ಅಳತೆಯಷ್ಟು ಆಟದ ಮೈದಾನ ಇದ್ದಲ್ಲಿ . . . . .<br>(ಇ) (ಆ) ಗಿಂತ ಕಡಿಮೆ ಅಳತೆಯ ಆಟದ ಮೈದಾನ ಇದ್ದಲ್ಲಿ . . . . . . . . . .<br>ಆಟದ ಮೈದಾನದ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | (ಗರಿಷ್ಠ 5 ಅಂಕಗಳು)<br>5 ಅಂಕಗಳು (ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ 8 ಅಂಕಗಳು)<br>ಸದರಿ 5 ಅಂಕಗಳ ಪೈಕಿ 2 ಅಂಕಗಳು (ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, ಸದರಿ 8 ಅಂಕಗಳ ಪೈಕಿ 4 ಅಂಕಗಳು)<br>ಯಾವುದೇ ಅಂಕಗಳು ಇಲ್ಲ |

263



| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ ಅಂಕಗಳು |
|---|---|---|
| | ಟಿಪ್ಪಣಿ : ಆಟದ ಮೈದಾನವನ್ನು ಹೊಂದದೇ ಇರುವ ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಅದನ್ನು ಒದಗಿಸಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶವನ್ನು ಪ್ರಸ್ತುತ ಆದೇಶದ ಕಂಡಿಕೆ 4(5) ರನ್ವಯ ನೀಡಬಹುದು ಹಾಗೂ ಮೂರು ವರ್ಷಗಳು ಮುಗಿಯುವುದರೊಳಗೆ ಈ ಸೌಲಭ್ಯಗಳನ್ನು ಒದಗಿಸಲು ವಿಫಲವಾದಲ್ಲಿ, ಸಹಾಯನುದಾನವನ್ನು ನಿಲ್ಲಿಸಲಾಗುವುದು ಎಂಬ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು ಎಂದು ಅನ್ವದ ಕಲ್ಪಿಸಲಾಗಿದೆ. | |
| | ಒಟ್ಟು | 100 ಅಂಕಗಳು |

ಸಹಾಯಾನುದಾನ ಪಡೆಯುವುದಕ್ಕಾಗಿ ಅರ್ಹವಾಗಲು ಸಂಬಂಧಿಸಿದ ಖಾಸಗಿ ಪ್ರಾಥಮಿಕ ಅಥವಾ ಪ್ರೌಢ ಶಾಲೆಯು ಸದರಿ 100 ಅಂಕಗಳ ಪೈಕಿ, ಕನಿಷ್ಠ 60 ಅಂಕಗಳನ್ನು ಪಡೆಯತಕ್ಕದ್ದು.

ಸದಸ್ಯರು ಸದಸ್ಯರು ಸದಸ್ಯರು

[ತಪಾಸಣಾ ತಂಡದ ಸದಸ್ಯರ ಹೆಸರು, ಪದನಾಮ ಮತ್ತು ಸಹಿ]

ಸೂಚನೆ: ಚೆಕ್‌ಲಿಸ್ಟ್‌ನಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಕೇವಲ "ಹೌದು" ಅಥವಾ "ಇಲ್ಲ" ವೆಂದು ನೀಡಿದಲ್ಲಿ ಅದು ಸಾಕಾಗುವುದಿಲ್ಲ. ಪ್ರತಿಯೊಂದು ಪ್ರಶ್ನೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಒದಗಿಸತಕ್ಕದ್ದು.

## ಚೆಕ್‌ಲಿಸ್ಟ್‌ನ ನಮೂನೆ - 2

ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಮೂಲಭೂತ ಸೌಲಭ್ಯಗಳನ್ನು ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಒದಗಿಸಿರುವ ಬಗ್ಗೆ ಸಹಾಯಾನುದಾನ ಪಡೆಯಲು ಅರ್ಹತೆ ನಿರ್ಧರಿಸಲು ಮೌಲ್ಯಮಾಪನವನ್ನು ಉಪಯೋಗಿಸತಕ್ಕ ಚೆಕ್‌ಲಿಸ್ಟ್‌ನ ನಮೂನೆ.

<table>
<tr><th>ಕ್ರಮ ಸಂಖ್ಯೆ</th><th>ಮಾನದಂಡ</th><th>ಗರಿಷ್ಠ ಅಂಕಗಳು</th></tr>
<tr><td>1.</td><td>ಆರ್.ಸಿ.ಸಿ./ಪಕ್ಕಾ ಕಟ್ಟಡ ಇರತಕ್ಕದ್ದು. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಕನಿಷ್ಠ ೮ ಚದರ ಅಡಿ ಜಾಗ ಹಾಗೂ ಪ್ರತಿಯೊಂದು ತರಗತಿ ಕೊಠಡಿಯ ಅಳತೆ ಕನಿಷ್ಠ ೬೬೦ ಚದರ ಅಡಿ ಇರತಕ್ಕದ್ದು. ೬೬೦ ಚದರ ಅಡಿಗಿಂತ ಕಡಿಮೆ ಅಳತೆ ಇದ್ದಲ್ಲಿ, ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ.<br><br>ಪ್ರತಿಯೊಂದು ವಿಭಾಗಕ್ಕಾಗಿ ಒಂದು ಕೊಠಡಿ ಇರತಕ್ಕದ್ದು.<br><br>ಕಟ್ಟಡದ ಬುನಾದಿ ಗಟ್ಟಿಯಾಗಿರತಕ್ಕದ್ದು ಹಾಗೂ ಪಕ್ಕಾ ಗೋಡೆಗಳು ಹೊಂದಿರತಕ್ಕದ್ದು. ಛಾವಣಿಯು ಆರ್.ಸಿ.ಸಿ. ಅಥವಾ ಸಿಮೆಂಟ್ ಅಥವಾ ಹೆಂಚು, ಇದರಿಂದ ಕಟ್ಟಿರತಕ್ಕದ್ದು.<br><br>ಪ್ರತಿಯೊಂದು ಕೊಠಡಿಯಲ್ಲಿ ಸಾಕಷ್ಟು ಬೆಳಕು, ಗಾಳಿ ಮತ್ತು ಅಗ್ನಿನಿರೋಧಕ ಯಂತ್ರಗಳು ಇರತಕ್ಕದ್ದು. ............<br><br>ಕಟ್ಟಡದ ಹಾಗು ಸಂಪೂರ್ಣ ನಿವೇಶನದ ಛಾಯಾಚಿತ್ರವನ್ನು ಹಾಗೂ ಕಟ್ಟಡದ ಪ್ಲಾನ್ ಮತ್ತು ನಿವೇಶನದ ಪ್ಲಾನ್‌ರ ಪ್ರತಿಗಳನ್ನು ಲಗತ್ತಿಸತಕ್ಕದ್ದು.</td><td>40 ಅಂಕಗಳು</td></tr>
<tr><td>2.</td><td>ಕಟ್ಟಡದಲ್ಲಿ ಈ ಕೆಳಕಂಡ ಕೊಠಡಿಗಳು ಒಳಗೊಂಡಿರತಕ್ಕದ್ದು-<br>ಪಿ.ಯು.ಸಿ.ಯನ್ನು ಪ್ರಾರಂಭಿಸಿದ ಮೊದಲನೇಯ ಸಾಲಿನಲ್ಲಿ ಎರಡು ವಿಭಾಗಗಳೊಂದಿಗೆ 40 ರಿಂದ 80 ವಿದ್ಯಾರ್ಥಿಗಳ ಸಂಖ್ಯಾಬಲ ಇದ್ದಲ್ಲಿ ಈ ಕೆಳಕಂಡ ಕೊಠಡಿಗಳನ್ನು ಒದಗಿಸಿರತಕ್ಕದ್ದು :-<br><br>(ಚದರ ಅಡಿ-Plinth area)
<table>
<tr><th>ಕೊಠಡಿಗಳು</th><th>ಅಳತೆ</th><th>ಸಂಖ್ಯೆ</th></tr>
<tr><td>1) ಉಪನ್ಯಾಸ ಕೊಠಡಿ</td><td>22'x30'</td><td>2</td></tr>
<tr><td>2) ಚಿಕ್ಕ ಕೊಠಡಿಗಳು (Smaller halls)</td><td>22'x15'</td><td>2</td></tr>
<tr><td>3) ಗ್ರಂಥಾಲಯ</td><td>1000'</td><td>1</td></tr>
<tr><td>4) ಸಿಬ್ಬಂದಿ ಕೊಠಡಿ</td><td>500'</td><td>1</td></tr>
<tr><td>5) ಕಛೇರಿ ಮತ್ತು ಪ್ರಾಂಶುಪಾಲರ ಕೊಠಡಿ</td><td>250' + 250'</td><td>1</td></tr>
<tr><td>6) ಹೆಣ್ಣುಮಕ್ಕಳ ಕೊಠಡಿ</td><td>500'</td><td>1</td></tr>
<tr><td>7) ಓದುವ ಕೊಠಡಿ</td><td>22'x30'</td><td>1</td></tr>
<tr><td><u>ವಿಜ್ಞಾನ (ಕಟ್ಟಡದ) ವಿಭಾಗ</u></td><td></td><td></td></tr>
<tr><td>8) ಪ್ರಾಯೋಗಿಕ ಕೊಠಡಿ (Practical hall) (ರಸಾಯನ)</td><td>25'x60'</td><td>1</td></tr>
<tr><td>9) ಪ್ರಾಯೋಗಿಕ ಕೊಠಡಿಗಳು (Practical halls)</td><td>25'x35'</td><td>2</td></tr>
<tr><td>10) ವಿಜ್ಞಾನ ಉಗ್ರಾಣ (Science stores)</td><td>25'x10'</td><td>2</td></tr>
<tr><td><u>ಪಿ.ಯು.ಸಿ.ಯನ್ನು ಪ್ರಾರಂಭಿಸಿದ ಎರಡನೇ ವರ್ಷದಲ್ಲಿ ಈ ಕೆಳಕಂಡವುಗಳನ್ನು ಹೆಚ್ಚುವರಿಯಾಗಿ ಒದಗಿಸತಕ್ಕದ್ದು :-</u></td><td></td><td></td></tr>
<tr><td>1) ಉಪನ್ಯಾಸ ಕೊಠಡಿ</td><td>22'x30'</td><td>2</td></tr>
<tr><td>2) ಚಿಕ್ಕ ಕೊಠಡಿಗಳು (Smaller halls)</td><td>22'x15'</td><td>2</td></tr>
</table></td><td></td></tr>
</table>

461



| ಕ್ರಮ ಸಂಖ್ಯೆ | ಮಾನದಂಡ | ಗರಿಷ್ಠ ಅಂಕಗಳು |
|---|---|---|
| | 1. ಟಿಪ್ಪಣಿ: ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ, ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರ ನಿಯಮ 4(2)(b)(X) ರ ಪ್ರಕಾರ ಪ್ರಯೋಗಾಲಯಗಳನ್ನು, ಅಂದರೆ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವ ಶಾಸ್ತ್ರ, ಇವುಗಳಿಗಾಗಿ ಒಂದೊಂದು ಪ್ರತ್ಯೇಕವಾದ ಪ್ರಯೋಗಾಲಯ ಇರತಕ್ಕದ್ದು. ಎಲೆಕ್ಟ್ರಾನಿಕ್ಸ್ ಅಥವಾ ಕಂಪ್ಯೂಟರ್ ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿದ್ದಲ್ಲಿ, ಅದಕ್ಕಾಗಿ ಪ್ರತ್ಯೇಕವಾದ ಪ್ರಯೋಗಾಲಯ ಇರತಕ್ಕದ್ದು.<br>2. ಟಿಪ್ಪಣಿ: ಹೆಚ್ಚಿನ ವಿಭಾಗಗಳನ್ನು ತೆರೆಯಲು ಅನುಮತಿ ಪಡೆಯಲು ಅರ್ಹವಾಗಲು ಮೇಲಿನ ಪಟ್ಟಿಯಲ್ಲಿ ಉಲ್ಲೇಖಿಸಿದ ಪ್ರಮಾಣದಲ್ಲೇ ಕೊಠಡಿಗಳನ್ನು ಒದಗಿಸಿರತಕ್ಕದ್ದು. | 18 ಅಂಕಗಳು (ಪ್ರತಿಯೊಂದು ಕೊಠಡಿಗಾಗಿ 1 ಅಂಕ. ಈ ರೀತಿ ಒಟ್ಟು 18 ಕೊಠಡಿಗಳಿಗಾಗಿ 18 ಅಂಕಗಳು.)<br>ಪ್ರತಿಯೊಂದು ಕೊಠಡಿಯ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. |
| 3. | ಗ್ರಂಥಾಲಯ / ಓದುವ ಸ್ಥಳಾವಕಾಶ:<br>(ಅ) 1000 ಚದರ ಅಡಿ plinth areaದ ಸ್ಥಳಾವಕಾಶ;<br>(ಆ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಠ 5000 ಪುಸ್ತಕಗಳನ್ನು ಒಳಗೊಂಡ ಶಿಕ್ಷಕರ ಗ್ರಂಥಾಲಯ. . . . . . . .<br>(ಇ) ವಿವಿಧ ವಿಷಯಗಳಿಗೆ ಸಂಬಂಧಿಸಿದ ಕನಿಷ್ಠ 5000 ಪುಸ್ತಕಗಳನ್ನು ಒಳಗೊಂಡ ವಿದ್ಯಾರ್ಥಿಗಳ ಗ್ರಂಥಾಲಯ. ಅದರಲ್ಲಿ ಮ್ಯಾಪ್, ಸಿ.ಡಿ. ಮತ್ತು ಚಾರ್ಟ್‌ಗಳು ಒಳಗೊಂಡಿರಬಹುದು. . . .<br>ಗ್ರಂಥಾಲಯ ಕೊಠಡಿಯ ಹಾಗು ಪುಸ್ತಕಗಳ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | (ಗರಿಷ್ಠ 3 ಅಂಕಗಳು)<br>ಸದರಿ 3 ಅಂಕಗಳ ಪೈಕಿ<br>1 ಅಂಕ<br>ಸದರಿ 3 ಅಂಕಗಳ ಪೈಕಿ 1 ಅಂಕ |
| 4. | ಕ್ರೀಡಾ ಕೊಠಡಿ . . . . . . . | 3 ಅಂಕಗಳು |
| 5. | ಪ್ರಯೋಗ ಶಾಲಾ ಉಪಕರಣಗಳು ಮತ್ತು ರಾಸಾಯನಗಳು:<br>(ಅ) ಪ್ರಯೋಗ ಶಾಲಾ, ಕನಿಷ್ಠ 24 X 60 ಚದರ ಅಡಿ plinth areaದ ಸ್ಥಳಾವಕಾಶದೊಂದಿಗೆ.<br>(ಆ) ಇಲಾಖೆ ನಿಗದಿಪಡಿಸಿದ ಮಾದರಿ ಪಟ್ಟಿಯ ಪ್ರಕಾರ ಕನಿಷ್ಠ 30. ಸಾವಿರ ರೂಪಾಯಿಗಳ ಮೌಲ್ಯದ ಉಪಕರಣಗಳು ಇದ್ದು, ಅದರ ಪೈಕಿ ಕನಿಷ್ಠ ರೂ.20,000ಗಳಷ್ಟು ಮೌಲ್ಯದ ಉಪಕರಣಗಳು ರಾಸಯನ ಶಾಸ್ತ್ರಕ್ಕಾಗಿ ಮತ್ತು ರೂ.20,000ಗಳಷ್ಟು ಮೌಲ್ಯದ ಉಪಕರಣಗಳು ಭೌತ ಶಾಸ್ತ್ರಕ್ಕಾಗಿ ಹಾಗೂ ಉಳಿದ ವಿಷಯಗಳಿಗಾಗಿ ರೂ.20,000ಗಳಷ್ಟು ಮೌಲ್ಯದ ಉಪಕರಣಗಳು. . . . . . .<br>ಟಿಪ್ಪಣಿ: ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವ ಶಾಸ್ತ್ರ, ಇವುಗಳಿಗಾಗಿ ಒಂದೊಂದು ಪ್ರತ್ಯೇಕವಾದ ಪ್ರಯೋಗಾಲಯ ಇರತಕ್ಕದ್ದು. ಎಲೆಕ್ಟ್ರಾನಿಕ್ಸ್ ಅಥವಾ ಕಂಪ್ಯೂಟರ್ ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿದ್ದಲ್ಲಿ, ಅದಕ್ಕಾಗಿ ಪ್ರತ್ಯೇಕವಾದ ಪ್ರಯೋಗಾಲಯ ಇರತಕ್ಕದ್ದು.<br>ಪ್ರಯೋಗ ಶಾಲೆಯ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. | 1.5 ಅಂಕಗಳು<br>1.5 ಅಂಕಗಳು |
| 6. | ಹೆಣ್ಣುಮಕ್ಕಳಿಗಾಗಿ ಶೌಚಾಲಯ<br>ಹೆಣ್ಣುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು.<br>ಹೆಣ್ಣುಮಕ್ಕಳ ಶೌಚಾಲಯದ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. . . . | 8 ಅಂಕಗಳು |
| 7. | ಗಂಡುಮಕ್ಕಳಿಗಾಗಿ ಶೌಚಾಲಯ<br>ಗಂಡುಮಕ್ಕಳಿಗಾಗಿ ಪಕ್ಕಾ ಶೌಚಾಲಯ ಇರತಕ್ಕದ್ದು. ಅದರಲ್ಲಿ 4 ಭಾಗಗಳಲ್ಲಿ ಯೂರಿನಲ್ಸ್ ಹಾಗೂ ಒಂದು ಶೌಚಾಲಯ ಇರತಕ್ಕದ್ದು.<br>ಗಂಡುಮಕ್ಕಳ ಶೌಚಾಲಯದ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು. . . . . | 5 ಅಂಕಗಳು |

460

| ಕ್ರ. | ಮಾನದಂಡ | ಗರಿಷ್ಠ ಅಂಕಗಳು |
| --- | --- | --- |
| 8. | ನೀರಿನ ಟ್ಯಾಂಕ್ (ಸ್ಥಿರವಾದ ಸಿಮೆಂಟ್ ಟ್ಯಾಂಕ್ ಅಥವಾ ಸಿಂಥಟಿಕ್ ಫೈಬರ್ ಟ್ಯಾಂಕ್ ಇತ್ಯಾದಿ)<br>50 ರಿಂದ 100 ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಠ 500 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. 100 ಕ್ಕಿಂತ ಹೆಚ್ಚು ಹಾಜರಾತಿ ಇರುವ ಶಾಲೆಗಳಲ್ಲಿ ಕನಿಷ್ಠ 1000 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಇರತಕ್ಕದ್ದು. . . . . . . . . .<br>ನೀರಿನ ಟ್ಯಾಂಕ್‌ನ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು | 5 ಅಂಕಗಳು |
| 9. | ಪೀಠೋಪಕರಣ:<br>(ಅ) ಹಾಜರಾದ ಎಲ್ಲಾ ಮಕ್ಕಳಿಗಾಗಿ ಕುಳಿತುಕೊಳ್ಳಲು ಇದ್ದಲ್ಲಿ. (ಹಾಜರಾದ ಎಲ್ಲಾ ಮಕ್ಕಳಿಗಾಗಿ ಕುಳಿತುಕೊಳ್ಳಲು ಇಲ್ಲದೇ ಇದ್ದಲ್ಲಿ ಯಾವುದೇ ಅಂಕಗಳನ್ನು ನೀಡತಕ್ಕದ್ದಲ್ಲ) . . . . . . .<br>(ಪ್ರತಿಯೊಂದು ಕೊಠಡಿಯಲ್ಲಿರುವ ಪೀಠೋಪಕರಣಗಳ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು) | 5 ಅಂಕಗಳು |
| 10. | ಪಾಠೋಪಕರಣ, ಕಲಿಕಾ ಮತ್ತು ಆಟೋಪಕರಣ<br>(ಅ) ರೂ. 10,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು ಇದ್ದಲ್ಲಿ . . . . . .<br>(ಆ) ರೂ. 5,000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳು, ಆದರೆ ರೂ. 10,000/- ಕಡಿಮೆ ಇದ್ದಲ್ಲಿ . . . .<br>(ಇ) ರೂ. 5,000/- ಕ್ಕಿಂತ ಕಡಿಮೆ ಬೆಲೆಯ ಉಪಕರಣಗಳು . . . . | (ಗರಿಷ್ಠ 5 ಅಂಕಗಳು)<br>5 ಅಂಕಗಳು<br>ಸದರಿ 5 ಅಂಕಗಳ ಪೈಕಿ 2 ಅಂಕಗಳು<br>ಯಾವುದೇ ಅಂಕಗಳು ಇಲ್ಲ. |
| 11. | ಆಟದ ಮೈದಾನ<br>(ಅ) ವಾಲಿಬಾಲ್ ಕೋರ್ಟ್‌ನ ಎರಡು ಪಟ್ಟು ಅಥವಾ ಅದಕ್ಕಿಂತ ಹೆಚ್ಚಿನ ಅಳತೆಯ ಆಟದ ಮೈದಾನ ಇದ್ದಲ್ಲಿ . . . . . . . . . . .<br>(ಆ) ಒಂದು ವಾಲಿಬಾಲ್ ಕೋರ್ಟ್‌ನ ಅಳತೆಯಷ್ಟು ಆಟದ ಮೈದಾನ ಇದ್ದಲ್ಲಿ . . . . . . . . . . . . . . . . . . . . . .<br>(ಇ) (ಆ) ರಿಂತ ಕಡಿಮೆ ಅಳತೆಯ ಆಟದ ಮೈದಾನ ಇದ್ದಲ್ಲಿ. . .<br>ಆಟದ ಮೈದಾನದ ಛಾಯಾಚಿತ್ರವನ್ನು ಲಗತ್ತಿಸತಕ್ಕದ್ದು.<br>ಟಿಪ್ಪಣಿ : ಆಟದ ಮೈದಾನವನ್ನು ಹೊಂದದೇ ಇರುವ ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಅದನ್ನು ಒದಗಿಸಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶವನ್ನು ಪ್ರಸ್ತುತ ಆದೇಶದ ಕಂಡಿಕೆ 4(5) ರನ್ವಯ ನೀಡಬಹುದು ಹಾಗೂ ಮೂರು ವರ್ಷಗಳು ಮುಗಿಯುವುದರೊಳಗೆ ಈ ಸೌಲಭ್ಯಗಳನ್ನು ಒದಗಿಸಲು ವಿಫಲವಾದಲ್ಲಿ, ಸಹಾಯನುದಾನವನ್ನು ನಿಲ್ಲಿಸಲಾಗುವುದು ಎಂಬ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು ಎಂದು ಆಸ್ಪದ ಕಲ್ಪಿಸಲಾಗಿದೆ. | (ಗರಿಷ್ಠ 5 ಅಂಕಗಳು)<br>5 ಅಂಕಗಳು<br>ಸದರಿ 5 ಅಂಕಗಳ ಪೈಕಿ 2 ಅಂಕಗಳು<br>ಯಾವುದೇ ಅಂಕಗಳು ಇಲ್ಲ |
| | ಒಟ್ಟು (ಗರಿಷ್ಠ) | 100 ಅಂಕಗಳು |

ಸಹಾಯಾನುದಾನ ಪಡೆಯುವುದಕ್ಕಾಗಿ ಅರ್ಹವಾಗಲು, ಸಂಬಂಧಿಸಿದ ಪದವಿ ಪೂರ್ವ ಕಾಲೇಜು, ಸದರಿ 100 ಅಂಕಗಳ ಪೈಕಿ, ಕನಿಷ್ಠ 60 ಅಂಕಗಳನ್ನು ಪಡೆಯತಕ್ಕದ್ದು.

ಸದಸ್ಯರು ಸದಸ್ಯರು ಸದಸ್ಯರು

[ತಪಾಸಣಾ ತಂಡದ ಸದಸ್ಯರ ಹೆಸರು, ಪದನಾಮ ಮತ್ತು ಸಹಿ]

ಸೂಚನೆ : ಚೆಕ್‌ಲಿಸ್ಟ್‌ನಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಕೇವಲ "ಹೌದು" ಅಥವಾ "ಇಲ್ಲ" ವೆಂದು ನೀಡಿದಲ್ಲಿ ಅದು ಸಾಕಾಗುವುದಿಲ್ಲ. ಪ್ರತಿಯೊಂದು ಪ್ರಶ್ನೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಒದಗಿಸತಕ್ಕದ್ದು.

459



## ಚೆಕ್‌ಲಿಸ್ಟ್‌ನ ನಮೂನೆ - 3

ದಿನಾಂಕ: 01.06.1987ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳು ನಡೆಸುತ್ತಿರುವ ಅನುದಾನರಹಿತ ಖಾಸಗಿ ಪ್ರಾಥಮಿಕ/ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೊಳಪಡಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಬೇಕಾದ ಚೆಕ್‌ಲಿಸ್ಟ್

| ಕ್ರ. ಸಂ. | ಷರತ್ತು | |
|---|---|---|
| 1. | ಖಾಸಗಿ ಪ್ರಾಥಮಿಕ/ಪ್ರೌಢಶಾಲೆಯ ಹೆಸರು ಮತ್ತು ವಿಳಾಸ | |
| 2. | ಖಾಸಗಿ ಪ್ರಾಥಮಿಕ/ಪ್ರೌಢಶಾಲೆ ಪ್ರಾರಂಭಿಸಲು ನೀಡಿದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ (ಆದೇಶದ ಪ್ರತಿ ಲಗತ್ತಿಸಿ) | |
| 3. | ಖಾಸಗಿ ಪ್ರಾಥಮಿಕ/ಪ್ರೌಢಶಾಲೆ ಪ್ರಾರಂಭವಾದ ವರ್ಷ, ತಿಂಗಳು ಮತ್ತು ದಿನಾಂಕ | |
| 4. | ಖಾಸಗಿ ಪ್ರಾಥಮಿಕ/ಪ್ರೌಢಶಾಲೆಯ ಬೋಧನಾ ಮಾಧ್ಯಮ (ಕನ್ನಡ/ಮರಾಠಿ/ ಉರ್ದು /ಇತ್ಯಾದಿ)<br>ಅ) ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ ;<br>ಆ) ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದೆ ? | |
| 5. | (ಅ) ಸದರಿ ಶಾಲೆಯನ್ನು ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಾವಳಿ, 1997ರ ಪ್ರಕಾರ ನೋಂದಾವಣೆಯಾಗಿದೆಯೇ? [ದಾಖಲೆ ಒದಗಿಸತಕ್ಕದ್ದು]<br>(ಆ) ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿ ಸದಸ್ಯರ ಇತ್ತೀಚಿನ ಪಟ್ಟಿ ಹಾಗೂ ಪಿ.ಟಿ.ಆರ್. (Present Term Renewal) ದೃಢೀಕೃತ ಪ್ರತಿ (ನೋಂದಾವಣೆ ಅಧಿಕಾರಿಯಿಂದ ಪಡೆದಿರುವುದನ್ನು ಲಗತ್ತಿಸತಕ್ಕದ್ದು.) | |
| 6. | ಆಡಳಿತ ಮಂಡಳಿಯಲ್ಲಿ ವಿವಾದವಿದೆಯೇ ? | |
| 7. | ನಿಯಮ ರೀತ್ಯಾ ಇಡಬೇಕಾದ ಸ್ಥಿರ ನಿಧಿ ಹಣವನ್ನು ಠೇವಣಿ ಇಡಲಾಗಿದೆಯೇ? (ದೃಢೀಕೃತ ದಾಖಲೆ ಒದಗಿಸತಕ್ಕದ್ದು) (ಸ್ಥಿರನಿಧಿ ಠೇವಣಿಯಲ್ಲಿ ವಿನಾಯಿತಿ ಸರ್ಕಾರದಿಂದ ದೊರೆತಿದ್ದಲ್ಲಿ ಆದೇಶ ಪ್ರತಿ ಒದಗಿಸುವುದು). | |
| 8. | ಚೆಕ್‌ಲಿಸ್ಟ್‌ನ ನಮೂನೆ-1 ರಲ್ಲಿ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಮಾಹಿತಿ ನೀಡಿ, ಪಡೆದಿರುವ ಅಂಕಗಳು ಎಷ್ಟು ? | |
| 9. | ಶಾಲೆಯ ಲೆಕ್ಕ ಪತ್ರಗಳ ಪರಿಶೋಧನೆ (ಆಡಿಟ್) ಆಗಿರುವುದೇ ? | |
| 10. | ಸದರಿ ಶಾಲೆಯಲ್ಲಿನ ಪ್ರತಿಯೊಂದು ತರಗತಿ ಮತ್ತು ವಿಭಾಗದಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿ ವಿವರ : | |
| 11. | ಸಿಬ್ಬಂದಿ ಮಾದರಿಯ ಬಗ್ಗೆ ರಚಿಸಿದ ನಿಯಮಗಳನುಸಾರ, ಅಂದರೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1999ರ ಪ್ರಕಾರ ಅರ್ಹರಾದ ಬೋಧಕ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಕೊಳ್ಳಲಾಗಿದೆಯೇ? | |
| 12. | (ಅ) ಸದರಿ ಶಾಲೆಗೆ ಸಂಬಂಧಿಸಿದಂತೆ ಬೋಧಕ / ಬೋಧಕೇತರ ಸಿಬ್ಬಂದಿಯನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ನಿಗದಿಪಡಿಸಿದ ಸೇವಾ ಸೌಲಭ್ಯಗಳನ್ನು/ ಷರತ್ತುಗಳನ್ನು ನೀಡಲಾಗಿದೆಯೇ ? | |

| ಕ್ರ. ಸಂ. | ಷರತ್ತು | |
|---|---|---|
| | (ಅ) ಸದರಿ ನಿಯಮಗಳ ನಿಯಮ 5ರಂತೆ ಉಚಿತ ನೇಮಕಾತಿ ಆದೇಶವನ್ನು ನೀಡಲಾಗಿದೆಯೇ? ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಹಾಗೂ Schedule of Employment, ಇವುಗಳನ್ನು ನಿರ್ವಹಿಸಲಾಗಿದೆಯೇ? | |
| | (ಇ) ಸದರಿ ನಿಯಮಗಳ ನಿಯಮ 6ರನ್ವಯ ನಿಷೇಧಿಸಿದಂತೆ, ನೇಮಕಾತಿಯ ಸಮಯದಲ್ಲಿಯೇ ಯಾವುದೇ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯದಿರುವ ಬಗ್ಗೆ ಹಾಗೂ ಅಂತಹ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ನೌಕರನನ್ನು ಒತ್ತಾಯಿಸದಿರುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಖಚಿತಪಡಿಸಿಕೊಂಡಿದ್ದಾರೆಯೇ? | |
| | (ಈ) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 92ರನ್ವಯ, ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೇ, ಸೇವೆಯಿಂದ ವಜಾ ಮಾಡಲು ಅಥವಾ ತೆಗೆದುಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಆಡಳಿತ ಮಂಡಳಿ ಆದರ ನೌಕರನ ವಿರುದ್ಧ ಕ್ರಮ ತೆಗೆದುಕೊಂಡಿದೆಯೇ ? | |
| 13. | ಅ) ದಿನಾಂಕ 1-6-1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಪ್ರೌಢ ಶಾಲೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭಿಸಿ ಇಲ್ಲಿಯವರೆಗೆ ಯಾವುದೇ ವಿಚ್ಛಿನ್ನತೆ ಇಲ್ಲದೇ, ಸತತವಾಗಿ ನಡೆಸಲಾಗಿದೆಯೇ ? ಈ ಅವಧಿಯಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ವಿದ್ಯಾರ್ಥಿಗಳನ್ನು ಪಬ್ಲಿಕ್ ಪರೀಕ್ಷೆಗಳಿಗೆ ಕೂಡಿಸಲಾಗಿದೆಯೇ ? ಹಾಗೂ ಸತತವಾಗಿ ನಡೆಸಲಾಗುತ್ತಿದೆಯೇ ?<br><br>ಆ) ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವು ಕಳೆದ 5 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇದೆಯೇ ? | |
| 14. | ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ದಿನಾಂಕ 22-11-2006ರ ಆದೇಶ ಸಂಖ್ಯೆ ಇಡಿ 46 ಎಸ್‌ಇಪಿ 2006(P), ದಿನಾಂಕ 27-12-2006ರ ಆದೇಶ ಸಂಖ್ಯೆ ಇಡಿ 380 ಎಸ್‌ಇಪಿ 2006 ಮತ್ತು ದಿನಾಂಕ 24-3-2007ರ ಆದೇಶ ಸಂಖ್ಯೆ ಇಡಿ 46 ಎಸ್‌ಇಪಿ 2006(ಭಾಗ), ಇವುಗಳ ಪ್ರಕಾರ ಸರ್ಕಾರ ನಿಗದಿಪಡಿಸಿದ ಶೇಕಡಾವಾರಿನ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ದಾಖಲಾತಿಯಲ್ಲಿ ಪ್ರಾತಿನಿಧ್ಯತೆಯನ್ನು ನೀಡಲಾಗಿದೆಯೇ ? | |
| 15. | ಸಂಬಂಧಿಸಿದ ಶಾಲೆ ನೋಂದಣಿಯಾಗಿದೆಯೇ ? ಹಾಗೂ ಮಾನ್ಯತೆ ಪಡೆದಿದೆಯೇ ? ಮತ್ತು ಸಹಾಯಾನುದಾನ ನೀಡುವ ವರ್ಷದವರೆಗೆ ನೋಂದಣಿ ಮತ್ತು ಮಾನ್ಯತೆಯ ನವೀಕರಣವನ್ನು ಹಾಗೂ ಮಾನ್ಯತೆಯನ್ನು ಪಡೆದಿದೆಯೇ ?<br><br>ಟಿಪ್ಪಣಿ: ಆದಾಗ್ಯೂ, ಹಾಗಿಲ್ಲದಿದ್ದಲ್ಲಿ, ಸಂಬಂಧಿಸಿದ ಖಾಸಗಿ ಶಾಲೆ ಸತತವಾಗಿ ನಡೆದಿದ್ದು, ಸಕಾರಣಕ್ಕಾಗಿ ಹಿಂದಿನ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದೇ ಇದ್ದರೂ, ಪ್ರಸ್ತುತ (ಅಂದರೆ, ಇತ್ತೀಚಿನ) ಮಾನ್ಯತೆ ಪಡೆದಿದ್ದಲ್ಲಿ, ಅದರ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು; | |

457



| ಕ್ರ. ಸಂ. | ಷರತ್ತು | |
|---|---|---|
| 16. | ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿದೆಯೇ ? | |
| 17. | ಸದರಿ ಶಾಲೆಗಾಗಿ ನೇಮಕಾತಿ ಮಾಡಿಕೊಂಡಿರುವ ನೌಕರರು ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಕಡ್ಡಾಯವಾಗಿ ಹೊಂದಿದ್ದಾರೆಯೇ ? | |
| 18. | ಕೆಲಸ ನಿರ್ವಹಿಸುತ್ತಿರುವ ನೌಕರರ ವಿವರ | |

| ಕ್ರ. ಸಂ. | ನೌಕರರ ಹೆಸರು ಮತ್ತು ಪದನಾಮ | ಜನ್ಮ ದಿನಾಂಕ | ನೇಮಕಾತಿ ದಿನಾಂಕ | ಹಾಜರಾದ ದಿನಾಂಕ | ಶಿಕ್ಷಕರು ಯಾವ ಮೀಸಲಾತಿ ವರ್ಗಕ್ಕೆ ಸೇರಿದವರು | ಇಲಾಖಾ ಅನುಮೋದನೆ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

| | | |
|---|---|---|
| 19. | ಪ್ರತಿಯೊಂದು ನೇಮಕಾತಿ ಸಂಬಂಧಿಸಿದಂತೆ ನಮೂನೆ-4ರ ಚೆಕ್‌ಲಿಸ್ಟ್‌ನಲ್ಲಿ ವಿವರಗಳನ್ನು ನೀಡಲಾಗಿದೆಯೇ ? | |
| 20. | ಸರ್ಕಾರದ ಮೀಸಲಾತಿ ಆದೇಶಗಳನ್ವಯ ನಿಗದಿಪಡಿಸಿದ 100 ಬಿಂದುಗಳ ಮೀಸಲಾತಿ ರೋಸ್ಟರಿನ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರ ಸಾಕಷ್ಟು ಪ್ರಾತಿನಿಧ್ಯತೆ ಇದೆಯೇ ? | |
| 21. | (ಅ) ಸದರಿ ಪ್ರಾಥಮಿಕ/ಪ್ರೌಢಶಾಲೆ ಪ್ರಥಮ ಮಾನ್ಯತೆ ಪಡೆದ ಬಗ್ಗೆ ದೃಢೀಕೃತ ದಾಖಲೆ ಒದಗಿಸಲಾಗಿದೆಯೇ ?<br>(ಆ) ಪ್ರಾಥಮಿಕ/ಪ್ರೌಢಶಾಲೆಗೆ ಮಾನ್ಯತೆ ನವೀಕರಣ ಮಾಡಿದ ಬಗ್ಗೆ ದೃಢೀಕೃತ ದಾಖಲೆ ಒದಗಿಸಲಾಗಿದೆಯೇ ? | |
| 22. | ಪ್ರತಿಯೊಂದು ನೇಮಕಾತಿ ಮಾಡುವಾಗ ಪತ್ರಿಕಾ ಪ್ರಕಟಣೆ ನೀಡಲಾಗಿದೆಯೇ ? ಸಂಬಂಧಿಸಿದ ಪತ್ರಿಕೆಯ ಮೂಲ ದಾಖಲಾತಿಯನ್ನು ಒದಗಿಸಲಾಗಿದೆಯೇ ? | |
| 23. | (ಅ) ಸದರಿ ಶಾಲೆಗಾಗಿ ನೇಮಕಾತಿಗಳನ್ನು ಮಾಡಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯಲಾಗಿದೆಯೇ ?<br>(ಆ) ಒಂದು ವೇಳೆ, ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆ ಆಗದಿದ್ದಲ್ಲಿ, ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸದರಿ ನೇಮಕಾತಿಗಳಿಗೆ, ಅನುಮೋದನೆಯನ್ನು ಪಡೆಯಲಾಗಿದೆಯೇ ? | |
| 24. | ನಿಗದಿತ ಸಿಬ್ಬಂದಿ ಮಾದರಿಯಂತೆ ("ಡಿ" ಗುಂಪು ನೌಕರರನ್ನು ಹೊರತುಪಡಿಸಿ) ಎಲ್ಲಾ ಸಿಬ್ಬಂದಿಗಳನ್ನು ನೇಮಕ ಮಾಡಿದ್ದರೆ ಮಾತ್ರ ಜಿಲ್ಲಾ ಪರಿಶೀಲನಾ ಸಮಿತಿ ಪರಿಗಣಿಸಿ ಅನುಮೋದಿಸತಕ್ಕದ್ದು. ಈ ಅಂಶವನ್ನು ಪರಿಶೀಲಿಸಲಾಗಿದೆಯೇ ? | |

| ಕ್ರ. ಸಂ. | ಷರತ್ತು | |
|---|---|---|
| 25. | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಪರಿಶೀಲನಾ ಸಮಿತಿಯು ಸಹಾಯಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಇದೆಯೇ ? | |
| 26. | ಸಂಬಂಧಿಸಿದ ಆಯುಕ್ತರು ಸಹಾಯಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದ್ದಾರೆಯೇ ? | |
| 27. | ನಿಗದಿತ ಸಿಬ್ಬಂದಿ ಮಾದರಿ ಮತ್ತು ನೇಮಕಾತಿ ಕಾರ್ಯವಿಧಾನದನ್ವಯ ನೇಮಕಾತಿಗಳಾಗಿರಬೇಕು. ಸರ್ಕಾರದ ಮೀಸಲಾತಿ ಆದೇಶಗಳನ್ವಯ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸಲಾಗಿದೆಯೇ ?<br><br><u>ಟಿಪ್ಪಣಿ :</u> ಆದಾಗ್ಯೂ ದಿನಾಂಕ 01-06-1992ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ಆದೇಶಗಳ ಉಲ್ಲಂಘನೆಯನ್ನು ದಿನಾಂಕ 21-04-1995ರ ಸರ್ಕಾರದ ಆದೇಶ ಸಂಖ್ಯೆ ಇಡಿ 227 ಎಸ್‌ಇಪಿ 94ರನ್ವಯ ಮನ್ನಾ ಮಾಡಲಾಗಿದೆ. ಅದರಿಂದಾಗಿ ದಿ. 1.6.92ರ ಪೂರ್ವದಲ್ಲಿ ನೇಮಕಾತಿ ಮಾಡಲಾಗಿದೆ ಎಂಬುವುದನ್ನು ಖಚಿತಪಡಿಸಿಕೊಳ್ಳಲು ದಿ. 22.1.1996ರ ಸುತ್ತೋಲೆ ಸಂಖ್ಯೆ ಇಡಿ 237 ಟಿಪಿಯು 95ರ ಮೂಲಕ ವಿಧಿಸಿದ ಷರತ್ತುಗಳನ್ನು ಪೂರೈಸಿದ್ದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಆದ ನಷ್ಟವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಅವರ ಪ್ರಾತಿನಿಧ್ಯತೆಯನ್ನು ಸರಿದೂಗಿಸಿಕೊಳ್ಳತಕ್ಕದ್ದೆಂಬ ಷರತ್ತನು ದಿ. 21.4.1995ರ ಸದರಿ ಆದೇಶದನ್ವಯ ವಿಧಿಸಲಾಗಿದೆ. ಆದರೆ, ದಿನಾಂಕ 20-06-1995ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95ರ ಕಂಡಿಕೆ-12(iii)ರನ್ವಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೇಮಕಾತಿಯಲ್ಲಿ ಮೀಸಲಾತಿ ಅನ್ವಯಿಸುವುದಿಲ್ಲ; ದಿ. 1.6.1987ರಿಂದ 1992-93ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ಅನುದಾನರಹಿತ ಅವಧಿಯಲ್ಲಿ ಮೀಸಲಾತಿ ರೋಸ್ಟರನ್ನು ಅನುಸರಿಸದೇ ಇದ್ದಲ್ಲಿ, ಅದರ ಪರಿಣಾಮವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯತೆಯಲ್ಲಿ ಉಂಟಾದ ಕೊರತೆಯನ್ನು ನೇರ ನೇಮಕಾತಿಯ ಮುಂದಿನ ಸಂದರ್ಭಗಳಲ್ಲಿ ಸರಿದೂಗಿಸತಕ್ಕದ್ದು. | |

ಸೂಚನೆ : ಚೆಕ್‌ಲಿಸ್ಟ್‌ನಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಕೇವಲ "ಹೌದು" ಅಥವಾ "ಇಲ್ಲ" ವೆಂದು ನೀಡಿದಲ್ಲಿ ಅದು ಸಾಕಾಗುವುದಿಲ್ಲ. ಪ್ರತಿಯೊಂದು ಪ್ರಶ್ನೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಒದಗಿಸತಕ್ಕದ್ದು.

4.55

## ಚೆಕ್‌ಲಿಸ್ಟ್‌ನ ನಮೂನೆ – 4

| | | |
|---|---|---|
| 1. | ಶಾಲೆಯ/ಪದವಿಪೂರ್ವ ಕಾಲೇಜಿನ ಹೆಸರು ಮತ್ತು ವಿಳಾಸ | |
| 2. | ಸಂಸ್ಥೆಯ ಹೆಸರು ಮತ್ತು ವಿಳಾಸ ಮತ್ತು ಆಡಳಿತ ಮಂಡಳಿ ಸೇರಿರುವ ವರ್ಗ | |
| 3. | ಮಾನ್ಯತೆ ಪಡೆದ ವಿವರ | |
| 4. | ಹುದ್ದೆಯ ಪದನಾಮ | |
| 5. | ಹುದ್ದೆ ತುಂಬಲು ಅನುಮತಿ ಪಡೆದ ಆದೇಶ ಸಂಖ್ಯೆ ಹಾಗೂ ದಿನಾಂಕ ಹಾಗೂ ಅನುಮತಿ ನೀಡಿದ ಪ್ರಾಧಿಕಾರ | |
| 6. | ರಿಕ್ತ ಸ್ಥಾನವನ್ನು ಯಾವ ವರ್ಗಕ್ಕಾಗಿ ಮೀಸಲಿಡಲಾಗಿತ್ತು ? | |
| 7. | ಆ ವರ್ಗದವರನ್ನೇ ಆಯ್ಕೆ ಮಾಡಲಾಗಿದೆಯೇ ? | |
| 8. | ಅನುದಾನಕ್ಕೆ ಒಳಪಡಿಸಲು ಪ್ರಸ್ತಾಪಿಸಲಾದ ಹುದ್ದೆ ನಿಗದಿತ ಮಾದರಿ ಸಿಬ್ಬಂದಿ ರಚನೆಗೆ (Staffing Pattern) ಅನುಗುಣವಾಗಿದೆಯೇ ? | |
| 9. | ಹುದ್ದೆಯನ್ನು ತುಂಬಲು ಜಾಹಿರಾತು ನೀಡಿದ ದಿನಾಂಕ | |
| 10. | ಸಂದರ್ಶನ ನಡೆಸಿದ ದಿನಾಂಕ | |
| 11. | ಹುದ್ದೆಗೆ ನಿಗದಿಪಡಿಸಿದ ನಿಗದಿತ ವಿದ್ಯಾರ್ಹತೆ ಹಾಗೂ ನಿಗದಿತ ವಯೋಮಿತಿ | |
| 12. | ಆಯ್ಕೆಯಾದವರ ಹೆಸರು, ಅವರು ಹೊಂದಿದ ವಿದ್ಯಾರ್ಹತೆ ಹಾಗೂ ವಯಸ್ಸು | |
| 13. | ಆಯ್ಕೆ ನಿಯಮಾನುಸಾರ ಆಗಿದೆಯೇ ? | |
| 14. | ಆಯ್ಕೆ ಪಟ್ಟಿ ಮಾಡಿ ಪ್ರಕಟಿಸಿದ ದಿನಾಂಕ | |
| 15. | ನೇಮಕಾತಿಯ ಅನುಮೋದನೆಗಾಗಿ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಸಂಬಂಧಿಸಿದ ಜಿಲ್ಲಾ ಮಟ್ಟದ ಸ್ಕ್ರೀನಿಂಗ್ ಕಮಿಟಿಯ ಮುಂದೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ. ಸಲ್ಲಿಸದೇ ಇದ್ದಲ್ಲಿ, ಅದಕ್ಕೆ ಕಾರಣ. ಸಲ್ಲಿಸಿದ್ದಲ್ಲಿ ಸ್ಕ್ರೀನಿಂಗ್ ಸಮಿತಿಯ ಶಿಫಾರಸ್ಸು. | |
| 16. | ನೇಮಕಾತಿ ಮಾಡಿದ ದಿನಾಂಕ | |
| 17. | ಉಪನಿರ್ದೇಶಕರ ಅಭಿಪ್ರಾಯ/ಶಿಫಾರಸ್ಸು | |

ಸೂಚನೆ : ಚೆಕ್‌ಲಿಸ್ಟ್‌ನಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಕೇವಲ "ಹೌದು" ಅಥವಾ "ಇಲ್ಲ" ವೆಂದು ನೀಡಿದಲ್ಲಿ ಅದು ಸಾಕಾಗುವುದಿಲ್ಲ. ಪ್ರತಿಯೊಂದು ಪ್ರಶ್ನೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಒದಗಿಸತಕ್ಕದ್ದು.

454

## ಚೆಕ್‌ಲಿಸ್ಟ್‌ನ ನಮೂನೆ - 5

ದಿನಾಂಕ: 01.06.1987ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಸಾಮಾನ್ಯ ವರ್ಗದ ಆಡಳಿತ ಮಂಡಳಿಯ ವತಿಯಿಂದ ನಡೆಸುತ್ತಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ ನಿಗಧಿಪಡಿಸಿರುವ ಚೆಕ್‌ಲಿಸ್ಟ್.

| ಕ್ರ ಸಂ | ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆಗಾಗಿ ನಿಗದಿತ ಷರತ್ತು ಇತ್ಯಾದಿಗಳು | ನಿಗದಿತ ಷರತ್ತು ಇತ್ಯಾದಿಗಳು ಪೂರೈಸಲಾಗಿದೆಯೇ ? ಅಥವಾ ಇಲ್ಲವೇ ? ಮಾಹಿತಿ ನೀಡಿ ದೃಢೀಕೃತ ದಾಖಲೆ ಒದಗಿಸುವುದು. |
|---|---|---|
| 1. | ಖಾಸಗಿ ಪದವಿ ಪೂರ್ವ ಕಾಲೇಜಿನ ಹೆಸರು ಮತ್ತು ವಿಳಾಸ | |
| 2. | ಖಾಸಗಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಮಂಜೂರಾತಿ ನೀಡಿದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ (ಆದೇಶದ ಪ್ರತಿ ಲಗತ್ತಿಸಿ) | |
| 3. | ಖಾಸಗಿ ಪದವಿ ಪೂರ್ವ ಕಾಲೇಜು ಪ್ರಾರಂಭವಾದ ವರ್ಷ, ತಿಂಗಳು ಮತ್ತು ದಿನಾಂಕ | |
| 4. | ಖಾಸಗಿ ಪದವಿ ಪೂರ್ವ ಕಾಲೇಜಿನ ಬೋಧನಾ ಮಾಧ್ಯಮ (ಕನ್ನಡ/ಮರಾಠಿ/ಉರ್ದು/ಇತ್ಯಾದಿ)<br>ಅ) ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ ;<br>ಆ) ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದೆ ? | |
| 5. | (ಅ) ಸದರಿ ಪದವಿ ಪೂರ್ವ ಕಾಲೇಜನ್ನು ನಿಗದಿತ ನಿಯಮಗಳ ಪ್ರಕಾರ ನೋಂದಾಯಿಸಲಾಗಿದೆಯೇ ?<br>(ಆ) ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿ ಸದಸ್ಯರ ಇತ್ತೀಚಿನ ಪಟ್ಟಿ ಹಾಗೂ ಪಿ.ಟಿ.ಆರ್. (Present Term Renewal) ದೃಢೀಕೃತ ಪ್ರತಿ (ನೋಂದಾವಣೆ ಅಧಿಕಾರಿಯಿಂದ ಪಡೆದಿರುವುದನ್ನು ಲಗತ್ತಿಸತಕ್ಕದ್ದು.) | |
| 6. | ಆಡಳಿತ ಮಂಡಳಿಯಲ್ಲಿ ವಿವಾದವಿದೆಯೇ ? | |
| 7. | ನಿಯಮ ರೀತ್ಯಾ ಇಡಬೇಕಾದ ಸ್ಥಿರ ನಿಧಿ ಹಣವನ್ನು ಠೇವಣಿ ಇಡಲಾಗಿದೆಯೇ? (ದೃಢೀಕೃತ ದಾಖಲೆ ಒದಗಿಸತಕ್ಕದ್ದು) (ಸ್ಥಿರನಿಧಿ ಠೇವಣಿಯಲ್ಲಿ ವಿನಾಯಿತಿ ಸರ್ಕಾರದಿಂದ ದೊರೆತಿದ್ದಲ್ಲಿ ಆದೇಶ ಪ್ರತಿ ಒದಗಿಸುವುದು). | |
| 8. | ಚೆಕ್‌ಲಿಸ್ಟ್‌ನ ನಮೂನೆ-2 ರಲ್ಲಿ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಮಾಹಿತಿ ನೀಡಿ, ಪಡೆದಿರುವ ಅಂಕಗಳು ಎಷ್ಟು ? | |
| 9. | (ಅ) ಸದರಿ ಪದವಿಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ಬೋಧಕ / ಬೋಧಕೇತರ ಸಿಬ್ಬಂದಿಯನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ನಿಗದಿಪಡಿಸಿದ ಸೇವಾ ಸೌಲಭ್ಯಗಳನ್ನು/ಷರತ್ತುಗಳನ್ನು ನೀಡಲಾಗಿದೆಯೇ ? | |

A53



| ಕ್ರ ಸಂ | ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆಗಾಗಿ ನಿಗದಿತ ಷರತ್ತು ಇತ್ಯಾದಿಗಳು | ನಿಗದಿತ ಷರತ್ತು ಇತ್ಯಾದಿಗಳು ಪೂರೈಸಲಾಗಿದೆಯೇ ? ಅಥವಾ ಇಲ್ಲವೇ ? ಮಾಹಿತಿ ನೀಡಿ ದೃಢೀಕೃತ ದಾಖಲೆ ಒದಗಿಸುವುದು. |
| --- | --- | --- |
| | (ಅ) ಸದರಿ ನಿಯಮಗಳ ನಿಯಮ 5ರಂತೆ ಉಚಿತ ನೇಮಕಾತಿ ಆದೇಶವನ್ನು ನೀಡಲಾಗಿದೆಯೇ? ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಹಾಗೂ Schedule of Employment, ಇವುಗಳನ್ನು ನಿರ್ವಹಿಸಲಾಗಿದೆಯೇ? | |
| | (ಇ) ಸದರಿ ನಿಯಮಗಳ ನಿಯಮ 6ರನ್ವಯ ನಿಷೇಧಿಸಿದಂತೆ, ನೇಮಕಾತಿಯ ಸಮಯದಲ್ಲಿಯೇ ಯಾವುದೇ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯದಿರುವ ಬಗ್ಗೆ ಹಾಗೂ ಅಂತಹ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ನೌಕರನನ್ನು ಒತ್ತಾಯಿಸದಿರುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಖಚಿತಪಡಿಸಿಕೊಂಡಿದ್ದಾರೆಯೇ? | |
| | (ಈ) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 92ರನ್ವಯ, ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೇ, ಸೇವೆಯಿಂದ ವಜಾ ಮಾಡಲು ಅಥವಾ ತೆಗೆದುಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಆಡಳಿತ ಮಂಡಳಿ ಅದರ ನೌಕರನ ವಿರುದ್ಧ ಕ್ರಮ ತೆಗೆದುಕೊಂಡಿದೆಯೇ ? | |
| 10. | ಸದರಿ ಪದವಿ ಪೂರ್ವ ಕಾಲೇಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ: 01.06.1987ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭವಾಗಿದೆಯೆ? [ಸಂಬಂಧಿಸಿದ ಪದವಿ ಪೂರ್ವ ಕಾಲೇಜು ಮಂಜೂರಾತಿ ಆದೇಶದ ದೃಢೀಕೃತ ಪ್ರತಿ ಒದಗಿಸುವುದು]. | |
| 11. | (ಅ) ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಪದವಿ ಪೂರ್ವ ಕಾಲೇಜುಗಳನ್ನು ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸಲಾಗಿದೆಯೇ?<br>(ಆ) ಸದರಿ ಪದವಿ ಪೂರ್ವ ಕಾಲೇಜು ಪ್ರಾರಂಭವಾದ ವರ್ಷದಿಂದ ಕಳೆದ ವರ್ಷದವರೆವಿಗೆ ವಿದ್ಯಾರ್ಥಿಗಳನ್ನು ಪಿ.ಯು.ಸಿ. ಪರೀಕ್ಷೆಗೆ ವಿಚ್ಛಿನ್ನತೆ ಇಲ್ಲದೇ, ಸತತವಾಗಿ ಕೂರಿಸಿರುವ ವಿವರಗಳನ್ನು ಒದಗಿಸಲಾಗಿದೆಯೇ ? | |
| 12. | ಸಂಬಂಧಿಸಿದ ಪದವಿ ಪೂರ್ವ ಕಾಲೇಜು ನೋಂದಣಿಯಾಗಿದೆಯೆ? ಮತ್ತು ಸಹಾಯಾನುದಾನ ನೀಡುವ ದಿನಾಂಕದಿಂದ ಮಾನ್ಯತೆಯನ್ನು ಪಡೆದಿದೆಯೆ? ಟಿಪ್ಪಣಿ : ಆದಾಗ್ಯೂ, ಹಾಗಿಲ್ಲದಿದ್ದಲ್ಲಿ, ಸಂಬಂಧಿಸಿದ ಪದವಿ ಪೂರ್ವ ಕಾಲೇಜು ಸತತವಾಗಿ ನಡೆದಿದ್ದು, ಸಕಾರಣಕ್ಕಾಗಿ ಹಿಂದಿನ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದೇ ಇದ್ದರೂ, ಪ್ರಸ್ತುತ (ಅಂದರೆ ಇತ್ತೀಚಿನ) ಮಾನ್ಯತೆ ಪಡೆದಿದ್ದಲ್ಲಿ ಅದರ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು. ಈ ಕುರಿತು ವಿವರಗಳನ್ನು ಒದಗಿಸುವುದು.] | |
| 13. | ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ದಿನಾಂಕ 22-11-2006ರ ಆದೇಶ ಸಂಖ್ಯೆ ಇಡಿ 46 ಎಸ್‌ಇಪಿ 2006(P), ದಿನಾಂಕ 27-12-2006ರ ಆದೇಶ ಸಂಖ್ಯೆ ಇಡಿ 380 ಎಸ್‌ಇಪಿ 2006 ಮತ್ತು ದಿನಾಂಕ 24-3-2007ರ ಆದೇಶ ಸಂಖ್ಯೆ ಇಡಿ 46 ಎಸ್‌ಇಪಿ 2006(ಭಾಗ), ಇವುಗಳ ಪ್ರಕಾರ ಸರ್ಕಾರ ನಿಗದಿಪಡಿಸಿದ ಶೇಕಡಾವಾರಿನ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ದಾಖಲಾತಿಯಲ್ಲಿ ಪ್ರಾತಿನಿಧ್ಯತೆಯನ್ನು ನೀಡಲಾಗಿದೆಯೇ ? | |

452

<table>
<tr><th>ಕ್ರ ಸಂ</th><th>ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆಗಾಗಿ ನಿಗದಿತ ಷರತ್ತು ಇತ್ಯಾದಿಗಳು</th><th>ನಿಗದಿತ ಷರತ್ತು ಇತ್ಯಾದಿಗಳು ಪೂರೈಸಲಾಗಿದೆಯೇ ? ಅಥವಾ ಇಲ್ಲವೇ ? ಮಾಹಿತಿ ನೀಡಿ ದೃಢೀಕೃತ ದಾಖಲೆ ಒದಗಿಸುವುದು.</th></tr>
<tr><td>14.</td><td>ಕಾಲೇಜಿನ ಸುತ್ತಮುತ್ತಲಿನ, ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿದೆಯೆ?</td><td></td></tr>
<tr><td>15.</td><td>ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದಂತೆ ನಮೂನೆ-4ರ ಚೆಕ್‌ಲಿಸ್ಟ್‌ನಲ್ಲಿ ವಿವರಗಳನ್ನು ನೀಡಲಾಗಿದೆಯೇ ?</td><td></td></tr>
<tr><td>16.</td><td>ಸರ್ಕಾರ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಂಡಿದೆಯೆ? ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರುತ್ತದೆಯೆ? ಪ್ರತಿಯೊಂದು ಸಂಯೋಜನೆಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿ ಇರುತ್ತದೆಯೆ? ನಿಯಮಗಳಲ್ಲಿ ನಿಗದಿಪಡಿಸಿರುವ ಸಿಬ್ಬಂದಿ ಮಾದರಿಯನ್ವಯ ವಿಷಯವಾರು ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆಯೆ?</td><td>ಇತ್ತೀಚಿನ 05 ವರ್ಷಗಳ ದಾಖಲಾತಿ/ ಹಾಜರಾತಿಯ ವಿವರಗಳು.
<table><tr><td>ವರ್ಷ</td><td>ದಾಖಲಾತಿ</td><td>ಹಾಜರಾತಿ</td></tr><tr><td>1</td><td>2</td><td>3</td></tr></table></td></tr>
<tr><td>17.</td><td>ಸರ್ಕಾರದ ಮೀಸಲಾತಿ ಆದೇಶಗಳನ್ವಯ ನಿಗದಿಪಡಿಸಿದ 100 ಬಿಂದುಗಳ ಮೀಸಲಾತಿ ರೋಸ್ಟರಿನ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರ ಸಾಕಷ್ಟು ಪ್ರಾತಿನಿಧ್ಯತೆ ಇದೆಯೇ ?</td><td></td></tr>
<tr><td>18.</td><td>ಖಾಸಗಿ ಪದವಿ ಪೂರ್ವ ಕಾಲೇಜು ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಉಪನ್ಯಾಸಕರು ಮತ್ತು ನೌಕರರು ನಿಯಮಗಳಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿನ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರುತ್ತಾರೆಯೆ ?</td><td></td></tr>
<tr><td>19.</td><td>ಪ್ರತಿಯೊಂದು ನೇಮಕಾತಿ ಮಾಡುವಾಗ ಪತ್ರಿಕಾ ಪ್ರಕಟಣೆ ನೀಡಲಾಗಿದೆಯೇ ? ಸಂಬಂಧಿಸಿದ ಪತ್ರಿಕೆಯ ಮೂಲ ದಾಖಲಾತಿಯನ್ನು ಒದಗಿಸಲಾಗಿದೆಯೇ ?</td><td></td></tr>
<tr><td>20.</td><td>ಈ ಸಂಸ್ಥೆಗಳಲ್ಲಿ ಮಾಡಿಕೊಂಡ ನೇಮಕಾತಿಗಳಿಗಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆಯೆ ? ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆ ಆಗದಿದ್ದಲ್ಲಿ ಪ್ರಸ್ತುತ ನೇಮಕಾತಿಗಳಿಗೆ ಸಂಬಂಧಿಸಿದಂತೆ ರಚಿಸಿರುವ ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ, ಸದರಿ ನೇಮಕಾತಿಗಳಿಗೆ, ಸದರಿ ಸಮಿತಿ ಅನುಮೋದನೆ ಪಡೆದು ನಂತರ ನೇಮಕಾತಿ ಅನುಮೋದನಾ ಆದೇಶವನ್ನು ಹೊರಡಿಸಲಾಗಿದೆಯೆ ?</td><td></td></tr>
<tr><td>21.</td><td>ನಿಗದಿತ ಸಿಬ್ಬಂದಿ ಮಾದರಿಯಂತೆ ("ಡಿ" ಗುಂಪು ನೌಕರರನ್ನು ಹೊರತುಪಡಿಸಿ) ಎಲ್ಲಾ ಸಿಬ್ಬಂದಿಗಳನ್ನು ನೇಮಕ ಮಾಡಿದ್ದರೆ ಮಾತ್ರ ಜಿಲ್ಲಾ ಪರಿಶೀಲನಾ ಸಮಿತಿ ಪರಿಗಣಿಸಿ ಅನುಮೋದಿಸತಕ್ಕದ್ದು. ಈ ಅಂಶವನ್ನು ಪರಿಶೀಲಿಸಲಾಗಿದೆಯೇ ?</td><td></td></tr>
<tr><td>22.</td><td>ಜಿಲ್ಲಾ ಪರಿಶೀಲನಾ ಸಮಿತಿ ಸಹಾಯಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆಯೇ ?</td><td></td></tr>
<tr><td>23.</td><td>ಸಂಬಂಧಿಸಿದ ಆಯುಕ್ತರು ಸಹಾಯಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದ್ದಾರೆಯೇ ?</td><td></td></tr>
</table>

| ಕ್ರ ಸಂ | ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆಗಾಗಿ ನಿಗದಿತ ಷರತ್ತು ಇತ್ಯಾದಿಗಳು | ನಿಗದಿತ ಷರತ್ತು ಇತ್ಯಾದಿಗಳು ಪೂರೈಸಲಾಗಿದೆಯೇ ? ಅಥವಾ ಇಲ್ಲವೇ ? ಮಾಹಿತಿ ನೀಡಿ ದೃಢೀಕೃತ ದಾಖಲೆ ಒದಗಿಸುವುದು. |
|---|---|---|
| 24. | ನಿಗದಿತ ಸಿಬ್ಬಂದಿ ಮಾದರಿ ಮತ್ತು ನೇಮಕಾತಿ ಕಾರ್ಯವಿಧಾನದನ್ವಯ ನೇಮಕಾತಿಗಳಾಗಿರಬೇಕು. ಸರ್ಕಾರದ ಮೀಸಲಾತಿ ಆದೇಶಗಳನ್ವಯ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸಲಾಗಿದೆಯೇ ?<br><br>ಟಿಪ್ಪಣಿ : ಆದಾಗ್ಯೂ ದಿನಾಂಕ 01-06-1992ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ಆದೇಶಗಳ ಉಲ್ಲಂಘನೆಯನ್ನು ದಿನಾಂಕ 21-04-1995ರ ಸರ್ಕಾರದ ಆದೇಶ ಸಂಖ್ಯೆ ಇಡಿ 227 ಎಸ್‌ಇಪಿ 94ರನ್ವಯ ಮನ್ನಾ ಮಾಡಲಾಗಿದೆ. ಆದರಿಂದಾಗಿ ದಿ. 1.6.92ರ ಪೂರ್ವದಲ್ಲಿ ನೇಮಕಾತಿ ಮಾಡಲಾಗಿದೆ ಎಂಬುವುದನ್ನು ಖಚಿತಪಡಿಸಿಕೊಳ್ಳಲು ದಿ. 22.1.1996ರ ಸುತ್ತೋಲೆ ಸಂಖ್ಯೆ ಇಡಿ 237 ಟಿಪಿಯು 95ರ ಮೂಲಕ ವಿಧಿಸಿದ ಷರತ್ತುಗಳನ್ನು ಪೂರೈಸಿದ್ದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡಗಳಿಗೆ ಸೇರಿದವರಿಗೆ ಆದ ನಷ್ಟವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಅವರ ಪ್ರಾತಿನಿಧ್ಯತೆಯನ್ನು ಸರಿದೂಗಿಸಿಕೊಳ್ಳತಕ್ಕದ್ದೆಂಬ ಷರತ್ತನ್ನು ದಿ. 21.4.1995ರ ಸದರಿ ಆದೇಶದನ್ವಯ ವಿಧಿಸಲಾಗಿದೆ. ಆದರೆ, ದಿನಾಂಕ 20-06-1995ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95ರ ಕಂಡಿಕೆ-12(iii)ರನ್ವಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೇಮಕಾತಿಯಲ್ಲಿ ಮೀಸಲಾತಿ ಅನ್ವಯಿಸುವುದಿಲ್ಲ; ದಿ. 1.6.1987ರಿಂದ 1992-93ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಅನುದಾನರಹಿತ ಅವಧಿಯಲ್ಲಿ ಮೀಸಲಾತಿ ರೋಸ್ಟರನ್ನು ಅನುಸರಿಸದೇ ಇದ್ದಲ್ಲಿ, ಅದರ ಪರಿಣಾಮವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯತೆಯಲ್ಲಿ ಉಂಟಾದ ಕೊರತೆಯನ್ನು ನೇರ ನೇಮಕಾತಿಯ ಮುಂದಿನ ಸಂದರ್ಭಗಳಲ್ಲಿ ಸರಿದೂಗಿಸತಕ್ಕದ್ದು. | |
| 25. | ಸಂಬಂಧಿಸಿದ ಪದವಿ ಪೂರ್ವ ಕಾಲೇಜಿನ 2ನೇ ಪದವಿ ಪೂರ್ವ ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇದೆಯೇ?<br>ಆದಾಗ್ಯೂ ಈ ಷರತ್ತನ್ನು ಪೂರೈಸದೇ ಇರುವ ಪ್ರಕರಣಗಳಲ್ಲಿ ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಶೀಲಿಸಿ, ಸಹಾಯಾನುದಾನಕ್ಕೆ ಒಳಪಡಿಸಿದ 3ನೇ ವರ್ಷದಿಂದ ಅನ್ವಯಿಸುವುದು. ಅಂದರೆ ಅಂತಹ ಪ್ರಕರಣಗಳಲ್ಲಿಸಹಾಯಾನುದಾನಕ್ಕೆ ಒಳಪಡಿಸಿದ 3ನೇ ವರ್ಷದ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಮೇಲಿನಂತೆ ನಿಗದಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು ಎನ್ನುವ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವುದು. | |

450

| ಕ್ರ ಸಂ | ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆಗಾಗಿ ನಿಗದಿತ ಷರತ್ತು ಇತ್ಯಾದಿಗಳು | ನಿಗದಿತ ಷರತ್ತು ಇತ್ಯಾದಿಗಳು ಪೂರೈಸಲಾಗಿದೆಯೇ ? ಅಥವಾ ಇಲ್ಲವೇ ? ಮಾಹಿತಿ ನೀಡಿ ದೃಢೀಕೃತ ದಾಖಲೆ ಒದಗಿಸುವುದು. |
|---|---|---|
| 26. | ರಾಜ್ಯದಲ್ಲಿನ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಅನ್ವಯವಾಗುವ ಸಿಬ್ಬಂದಿ ಮಾದರಿ ರಚನೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 63 ಟಿಪಿಯು 2003, ದಿನಾಂಕ: 27-11-2000 ರಲ್ಲಿ ಕೆಳಕಂಡಂತೆ ರಚಿಸಿದೆ:-<br><br>01) ಪ್ರಾಂಶುಪಾಲರು - 01 ಹುದ್ದೆ<br>02) ಭಾಷಾ ವಿಷಯಗಳಲ್ಲಿ ಮಂಜೂರಾಗಿರುವ ಭಾಷೆಗಳಲ್ಲಿ (ನಿಗದಿತ ಕಾರ್ಯಭಾರವಿದ್ದಲ್ಲಿ) ಪ್ರತಿ ಭಾಷೆಗೆ ಒಬ್ಬರಂತೆ ಉಪನ್ಯಾಸಕರು.<br>03) ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದ ಮಂಜೂರಾಗಿರುವ ಸಂಯೋಜನೆಗಳಲ್ಲಿ ಪ್ರತಿ ಐಚ್ಛಿಕ ವಿಷಯಕ್ಕೆ ಒಬ್ಬರಂತೆ (ನಿಗದಿತ ಕಾರ್ಯಭಾರವಿದ್ದಲ್ಲಿ) ಉಪನ್ಯಾಸಕರು.<br>04) ಬೋಧಕೇತರ ಹುದ್ದೆ<br>05) ಮೇಲ್ಕಂಡಂತೆ ಇರುತ್ತದೆಯೆ ? | ಕೆಲಸ ನಿರ್ವಹಿಸುತ್ತಿರುವ ನೌಕರರ ವಿವರ |

| ಕ್ರ ಸಂ. | ನೌಕರರ ಹೆಸರು ಮತ್ತು ಪದನಾಮ | ಜನ್ಮ ದಿನಾಂಕ | ನೇಮಕಾತಿ ದಿನಾಂಕ | ಹಾಜರಾದ ದಿನಾಂಕ | ಯಾವ ಮೀಸಲಾತಿ ವರ್ಗಕ್ಕೆ ಸೇರಿದವರು | ಇಲಾಖಾ ಅನುಮೋದನೆ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಸೂಚನೆ : ಚೆಕ್‌ಲಿಸ್ಟ್‌ನಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಕೇವಲ "ಹೌದು" ಅಥವಾ "ಇಲ್ಲ" ವೆಂದು ನೀಡಿದಲ್ಲಿ ಅದು ಸಾಕಾಗುವುದಿಲ್ಲ. ಪ್ರತಿಯೊಂದು ಪ್ರಶ್ನೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಒದಗಿಸತಕ್ಕದ್ದು.

ಟಿ. ಹೆಚ್. ಪಡಸಲಗಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.